ಒಂದು ಅಂಗಡಿಯಲ್ಲಿ 200 ಸೀಸದಕಡ್ಡಿಗಳು ಇರುವುದು. ಅವುಗಳಲ್ಲಿ 142 ಸೀಸದ ಕಡ್ಡಿಗಳು ಮಾರಾಟವಾದರೆ. ಅಂಗಡಿಯಲ್ಲಿ ಉಳಿದಿರುವ ಸೀಸದ ಕಡ್ಡಿಗಳು ಎಷ್ಟು?

ಉತ್ತರ: _____.



ಒಂದು ಶಾಲೆಯ ಗ್ರಂಥಾಲಯದಲ್ಲಿ 400 ಪುಸ್ತಕಗಳು ಇರುವುದು. ಅವುಗಳಲ್ಲಿ 246 ಪುಸ್ತಕಗಳು ವಿದ್ಯಾರ್ಥಿಗಳಿಗೆ ನೀಡಲಾದರೆ ಗ್ರಂಥಾಲಯದಲ್ಲಿ ಉಳಿದಿರುವ ಪುಸ್ತಕಗಳು ಎಷ್ಟು?

ಉತ್ತರ: _____.



ಒಂದು ಹಬ್ಬಕ್ಕೆ 900 ಸಿಹಿ ತಿಂಡಿಗಳನ್ನು ತಯಾರಿಸಿದರು. ಅವುಗಳಲ್ಲಿ, 765 ಸಿಹಿ ತಿಂಡಿಗಳನ್ನು ಅತಿಥಿಗಳಿಗೆ ಬಡಿಸಿದರೆ ಉಳಿದಿರುವ ಸಿಹಿ ತಿಂಡಿಗಳು ಎಷ್ಟು?

ಉತ್ತರ: _____.



ಅಭ್ಯಾಸ ಮಾಡೋಣವೇ

ಸ್ಥಾನ ಬದಲಾವಣೆ ಇಲ್ಲದೆ ಸುಲಭ ರೀತಿಯಲ್ಲಿ ಕಳೆದು ಬರೆ.

800 - 1 = 799 -354 - 1 = -353 446	500 -128 ____
700 -413 ____	900 -549 ____
600 -375 ____	400 -267 ____

ಕೊಟ್ಟಿರುವಂತಹ ರೇಖೆಯಮೇಲೆ ಸಂಖ್ಯೆಗಳನ್ನು ಗುರುತಿಸಿ ಕಳೆದು ಬರೆ.

250 - 8



250 – 8 = 242

464 - 9

154 - 47



154 – 47 = 107

315 - 78

724 - 56

ಅಭ್ಯಾಸ ಮಾಡೋಣವೇ

ಕೊಟ್ಟಿರುವಂತಹ ಸಂಖ್ಯಾ ರೇಖೆಯ ಮೇಲೆ ಸಂಖ್ಯೆಗಳನ್ನು ಗುರುತಿಸಿ ಕಳೆದು ಬರೆ.

250 –125



250 - 125 = 125

376 - 218

716 - 425

ಸಂಖ್ಯಾ ರೇಖೆಯಲ್ಲಿ ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯವರೆಗೆ ಮುಂದಕ್ಕೆ ಹೋಗಿ ಕಳೆಯುವ ಲೆಕ್ಕಗಳಿಗೆ ಉತ್ತರ ಕಂಡುಹಿಡಿಯಿರಿ.

345-217



100 + 10 + 10 + 1 + 1 + 1 + 1 + 1 + 1 + 1 + 1

100 + 20 + 8 = 128

345 - 217 = 128

432-314

823-645

ಅಭ್ಯಾಸ ಮಾಡೋಣವೇ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಒಂದು ಅಂಗಡಿಯಲ್ಲಿ 425 ಗೊಂಬೆಗಳಲ್ಲಿ, 298 ಗೊಂಬೆಗಳು ಮಾರಾಟವಾದರೆ, ಉಳಿದಿರುವ ಗೊಂಬೆಗಳು ಎಷ್ಟು?



ಉಳಿದಿರೋ ಗೊಂಬೆಗಳು 425

ನೂ	ಹ	ಒ
−		

ಅರುಣನ ಹತ್ತಿರ 486 ಅಂಚೆ ಚೀಟಿಗಳು ಇದ್ದವು. ಅವನ ಸ್ನೇಹಿತನಿಗೆ 279 ಅಂಚೆ ಚೀಟಿಗಳನ್ನು ನೀಡಿದನು, ಹಾಗಾದರೆ ಅರುಣನ ಹತ್ತಿರ ಉಳಿದಿರುವ ಅಂಚೆ ಚೀಟಿಗಳು ಎಷ್ಟು?



ಅರುಣಳ್ನ ಹತ್ತಿರ ಇದ್ದ ಅಂಚೆ ಚೀಟಿಗಳು 486

ನೂ	ಹ	ಒ
−		

ಕಮಲ್ ಪಡೆದಿರುವ ಅಂಕಗಳು, 427 ಕಮಲ್ ಗಿಂತ ವಿಮಲ್ 108 ಅಂಕಗಳು ಕಡಿಮೆಯಾಗಿ ಪಡೆದದನು. ಹಾಗಾದರೆ ವಿಮಲ್ ಪಡೆದ ಅಂಕೆಗಳು ಎಷ್ಟು?



ಕಮಲ್ ಪಡೆದ ಅಂಕಗಳು 427

ನೂ	ಹ	ಒ
−		

ಒಂದು ಸಮಾರಂಭಕ್ಕೆ 792 ಮೇಣದ ಬತ್ತಿಗಳನ್ನು ಪಡೆದರು. ಅವುಗಳಲ್ಲಿ 475 ಮೇಣದ ಬತ್ತಿಗಳನ್ನು ಬಳಸಿದರು. ಹಾಗಾದರೆ ಬಳಸದೇ ಉಳಿದ ಮೇಣದ ಬತ್ತಿಗಳು ಎಷ್ಟು?



ಪಡೆದ ಒಟ್ಟು ಮೇಣದ ಬತ್ತಿಗಳು 792

ನೂ	ಹ	ಒ
−		

ಕಲಿಕಾ ಪಯಣ

1. ಒಂದು ಶಾಲೆಯಲ್ಲಿ 700 ವಿದ್ಯಾರ್ಥಿಗಳು ಇರುವರು. ಅದರಲ್ಲಿ 187 ವಿದ್ಯಾರ್ಥಿಗಳು ಒಂದು ಸ್ಪರ್ಧೆಗಾಗಿ ಬೇರೆ ಊರಿಗೆ ತೆರಳಿದರು. ಶಾಲೆಯಲ್ಲಿ ಉಳಿದಿರುವ ವಿದ್ಯಾರ್ಥಿಗಳು ಎಷ್ಟು?



JJ8YU

ಉತ್ತರ: _____

2. ಸ್ಥಾನ ಬದಲಾವಣೆ ಇಲ್ಲದೆ ಸುಲಭ ವಿಧಾನದಲ್ಲಿ ಕಳೆದು ಬರೆ.

i) 7 0 0
- 5 2 7
_____

ii) 9 0 0
- 6 3 8
_____

3. ಕೊಟ್ಟಿರುವಂತಹ ಗೆರೆಗಳ ಮೇಲೆ ಸಂಖ್ಯೆಗಳನ್ನು ಗುರುತಿಸಿ ಕಳೆದು ಬರೆ 654 – 247



4. ಕೊಟ್ಟಿರುವಂತಹ ಗೆರೆಗಳ ಮೇಲೆ ಸಂಖ್ಯೆಗಳನ್ನು ಗುರುತಿಸಿ ಕಳೆದು ಬರೆ 718 – 149



5. ಒಂದು ಪಕ್ಷಿ ಸಂರಕ್ಷಣಾಲಯದಲ್ಲಿ 687 ಪಕ್ಷಿಗಳು ಇದ್ದವು. ಚಳಿಗಾಲ ಮುಗಿದ ನಂತರ 298 ಪಕ್ಷಿಗಳು ಬೇರೆ ಸ್ಥಳಗಳಿಗೆ ಹಾರಿ ಹೋದವು ಹಾಗಾದರೆ ಉಳಿದಿರುವ ಪಕ್ಷಿಗಳು ಎಷ್ಟು?





ನಾವು ಕಲಿತದ್ದು

ನನ್ನಿಂದ,

ಕೂಡುವುದರ ಮೂಲಕ ಕಳೆಯುವ ಲೆಕ್ಕಗಳಿಗೆ ಉತ್ತರ ನೋಡಲು ಸಾಧ್ಯ.

ಗೆರೆಗಳನ್ನು ಬಳಸಿ ಸಂಖ್ಯೆಗಳನ್ನು ಕಳೆಯಬಹುದು.

ನನ್ನಿಂದ ಸಾಧ್ಯ

ಕೆಳಗೆ ಬರುವ ಪ್ರಶ್ನೆಗಳಿಗೆ ಉತ್ತರಿಸಿ

1. ಕೊಟ್ಟಿರುವಂತಹ ಚಿತ್ರಗಳಿಗೆ ಸೂಕ್ತವಾದ ಗುಣಾಕಾರದ ಹೇಳಿಕೆಯನ್ನು ಬರೆ

i) 

ii) 

2. ಗುಣಿಸು.

i) 5 x 4 _____

ii) 9 x 5 _____

3. (i) ಒಂದು ಕಾರಿನಲ್ಲಿ 4 ಚಕ್ರಗಳು ಇರುವುದು, ಏಳು ಕಾರುಗಳಲ್ಲಿ ಎಷ್ಟು ಚಕ್ರಗಳು ಇರುತ್ತದೆ?

ಉತ್ತರ: _____

(ii) ಒಂದು ತೋಟದಲ್ಲಿ ಐದು ಹೂವುಗಳು ಇರುವುದು, 8 ತೋಟಗಳಲ್ಲಿ ಎಷ್ಟು ಹೂಗಳು ಇರುವುದು?

ಉತ್ತರ: _____

4. (i) ವಸ್ತುಗಳ ತೂಕವನ್ನು ಅಳೆಯಲು ಸಹಾಯವಾಗುವ ನಿಖರವಾದ ಅಳತೆ ಕೋಲನ್ನು (✓) ಹಾಕಿ.

(ಅ) ಮೀಟರ್ (ಆ) ಕಿಲೋಗ್ರಾಂ (ಇ) ತೋಲ

(ii) ಅರ್ಧ ಕಿಲೋಗ್ರಾಂ ಗಿಂತ ಕಡಿಮೆ ತೂಕ ಇರುವ ವಸ್ತುವಿಗೆ (✓) ಹಾಕಿ.

 ☐  ☐

5. (i) ಕೊಟ್ಟಿರುವಂತಹ ಗೆರೆಯ ಮೇಲೆ ಸಂಖ್ಯೆಗಳನ್ನು ಗುರುತಿಸಿ, ಕಳೆದು ಬರೆ.

650 - 135

_____

(ii) ಸ್ಥಾನ ಬದಲಾಗದೆ ಸರಳ ವಿಧಾನದಲ್ಲಿ ಕಳೆದು ಬರೆ.

```
  8 0 0
- 3 5 4
-------
```

ನಾನೇ ಮಾಡಿದೆನು

6. ಕೆಳಗೆ ಬರುವ ಪ್ರಶ್ನೆಗಳಿಗೆ ಉತ್ತರ ಬರೆ.

i) ಎರಡು ಅರ್ಧ ಕಿಲೋ ಗ್ರಾಂಗಳನ್ನು ಸೇರಿಸಿದರೆ 1 ಕಿಲೋ ಗ್ರಾಂ ಸಿಗುವುದು.



ಕಾರಣ ಹೇಳಿ?

ii) ಸೀನು: ಒಂದು ಸೇಬು ಹಣ್ಣಿನ ತೂಕ 1 ಕಿಲೋ ಗ್ರಾಂ ಗಿಂತ ಅಧಿಕ.

ಮೀನು: ಒಂದು ಸೇಬು ಹಣ್ಣಿನ ತೂಕ 1 ಕಿಲೋ ಗ್ರಾಂ ಗಿಂತ ಕಡಿಮೆ.

ಯಾರು ಹೇಳುವುದು ಸರಿ?

iii) ಎರಡನೇ ಮಗ್ಗಿಯನ್ನು ಎರಡು ಬಾರಿ ಕೂಡಿ ನಾಲ್ಕನೇ ಮಗ್ಗಿಯನ್ನು ರಚಿಸಲು ಸಾಧ್ಯವೇ?



ಕಾರಣ ಹೇಳು?

iv) 2 x 5 ಮತ್ತು 5 x 2 ಇವುಗಳ ಉತ್ತರ ಒಂದೇ ಬರುವುದೇ?



ಕಾರಣ ಹೇಳು?

7. ತಪ್ಪುಗಳನ್ನು ಕಂಡುಹಿಡಿದು ಹೇಳು?

	ನೂ	ಹ	ಒ
			~~15~~
	3	4	5
-	2	2	6
	1	2	9

	ನೂ	ಹ	ಒ
	2	4	6
-	1	5	8
	1	1	2

	ನೂ	ಹ	ಒ
	2	9	0
-	1	2	7
	1	7	7

ಕಾರ್ಯ ಯೋಜನೆ

8. ಗುಣಾಕಾರದ ಕೋಷ್ಟಕವನ್ನು ಪೂರ್ಣಗೊಳಿಸಿ.

x	1	2	3	4	5	6	7	8	9	10
1										
2										
3										
4										
5										

9. ನಿಮ್ಮ ಮನೆ ಹತ್ತಿರ ಇರುವ ದಿನಸಿ ಅಂಗಡಿಗೆ ತೆರಳಿ, ಅಲ್ಲಿ ಮಾರಾಟವಾಗುವ ವಸ್ತುಗಳ ಹೆಸರುಗಳನ್ನು ಕೇಳಿ ಕೋಷ್ಟಕವನ್ನು ಭರ್ತಿ ಮಾಡಿ.

1 ಕಿಲೋಗ್ರಾಂ ತೂಕವಿರುವ ಮಾರಾಟದ ವಸ್ತುಗಳು	1 ಕಿಲೋಗ್ರಾಂ ಗಿಂತ ಕಡಿಮೆ ತೂಕವಿರುವ ಮಾರಾಟದ ವಸ್ತುಗಳು

ಗುಣಾಕಾರದ ಮಗ್ಗಿಗಳು

1

1 x 1 = 1
2 x 1 = 2
3 x 1 = 3
4 x 1 = 4
5 x 1 = 5
6 x 1 = 6
7 x 1 = 7
8 x 1 = 8
9 x 1 = 9
10 x 1 = 10

2

1 x 2 = 2
2 x 2 = 4
3 x 2 = 6
4 x 2 = 8
5 x 2 = 10
6 x 2 = 12
7 x 2 = 14
8 x 2 = 16
9 x 2 = 18
10 x 2 = 20

3

1 x 3 = 3
2 x 3 = 6
3 x 3 = 9
4 x 3 = 12
5 x 3 = 15
6 x 3 = 18
7 x 3 = 21
8 x 3 = 24
9 x 3 = 27
10 x 3 = 30

4

1 x 4 = 4
2 x 4 = 8
3 x 4 = 12
4 x 4 = 16
5 x 4 = 20
6 x 4 = 24
7 x 4 = 28
8 x 4 = 32
9 x 4 = 36
10 x 4 = 40

5

1 x 5 = 5
2 x 5 = 10
3 x 5 = 15
4 x 5 = 20
5 x 5 = 25
6 x 5 = 30
7 x 5 = 35
8 x 5 = 40
9 x 5 = 45
10 x 5 = 50

6

1 x 6 = 6
2 x 6 = 12
3 x 6 = 18
4 x 6 = 24
5 x 6 = 30
6 x 6 = 36
7 x 6 = 42
8 x 6 = 48
9 x 6 = 54
10 x 6 = 60

7

1 x 7 = 7
2 x 7 = 14
3 x 7 = 21
4 x 7 = 28
5 x 7 = 35
6 x 7 = 42
7 x 7 = 49
8 x 7 = 56
9 x 7 = 63
10 x 7 = 70

8

1 x 8 = 8
2 x 8 = 16
3 x 8 = 24
4 x 8 = 32
5 x 8 = 40
6 x 8 = 48
7 x 8 = 56
8 x 8 = 64
9 x 8 = 72
10 x 8 = 80

9

1 x 9 = 9
2 x 9 = 18
3 x 9 = 27
4 x 9 = 36
5 x 9 = 45
6 x 9 = 54
7 x 9 = 63
8 x 9 = 72
9 x 9 = 81
10 x 9 = 90

10

1 x 10 = 10
2 x 10 = 20
3 x 10 = 30
4 x 10 = 40
5 x 10 = 50
6 x 10 = 60
7 x 10 = 70
8 x 10 = 80
9 x 10 = 90
10 x 10 = 100

ಕಲಿಕಾ ಪಯಣ

ವಸ್ತುಗಳ ತೂಕವನ್ನು ನಿಖರ ಅಳತೆ ತಕ್ಕಡಿಯನ್ನು ಬಳಸಿ ಅಳೆಯುವುದು.

2, 3, 4, 5 ಮತ್ತು 10 ಹಾಗೆಯೇ ಗುಣಾಕಾರದ ಮಗ್ಗಿಗಳನ್ನು ರಚಿಸುವುದು.

999 ರ ಹೊರಗಿನ ಸಂಖ್ಯೆಗಳನ್ನು (ಸ್ಥಾನ ಬದಲಾವಣೆಯೊಂದಿಗೆ) ಬೇರೆಬೇರೆ ವಿಧಾನಗಳಲ್ಲಿ ಕೂಡುವುದು ಮತ್ತು ಕಳೆಯುವುದು.

ಮಾದರಿಗಳ ಗುಣಲಕ್ಷಣಗಳನ್ನು ತಿಳಿದುಕೊಳ್ಳುವುದು.

999 ರ ವರಗಿನ ಸಂಖ್ಯೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಹೋಲಿಸುವುದು.

ಮೂರನೇ ತರಗತಿ

ಅವಧಿ - II

ವಿಜ್ಞಾನ



ಮುನ್ನುಡಿ

ತಮಿಳುನಾಡು ರಾಜ್ಯ ಶಿಕ್ಷಣ ನೀತಿ 2025 ನ್ನು ಆಧರಿಸಿ ಪರಿಸರ ಅಧ್ಯಯನ ಪಠ್ಯಪುಸ್ತಕವನ್ನು ರಚಿಸಲ್ಪಟ್ಟಿದೆ. ಈ ಪಠ್ಯ ಪುಸ್ತಕ ಮಕ್ಕಳ ಕೇಂದ್ರೀಕೃತ ಆಧಾರಿತ ಮತ್ತು ಅನ್ವೇಷಿಸಿ ತಿಳಿಯುವ ರೀತಿಯಲ್ಲಿ ಕಲಿಕೆಯನ್ನು ಕೇಂದ್ರೀಕರಿಸಿ ವಿನ್ಯಾಸಗೊಳಿಸಲ್ಪಟ್ಟಿದೆ.

ವೈಜ್ಞಾನಿಕ ಮನೋಭಾವವನ್ನು ಸುಧಾರಿಸಲು ಪ್ರಮುಖ ಚಟುವಟಿಕೆಗಳು.



ಗಮನಿಸಿ ಮತ್ತು ಚರ್ಚಿಸಿ

ಚಿತ್ರಪಟಗಳು ಜೀವನದ ಸನ್ನಿವೇಶಗಳ ಬಗ್ಗೆ ಚರ್ಚಿಸುವುದರ ಮೂಲಕ ಸೂಕ್ಷ್ಮವಾಗಿ ಗಮನಿಸುವುದು, ಪ್ರಶ್ನೆ ಕೇಳುವುದು, ಹೋಲಿಸಿ ನೋಡುವುದು, ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಬೆಳೆಸುವುದು.



ಮಾಡು ಮತ್ತು ಕಲಿ

ಸರಳ ಕಾರ್ಯವಿಧಾನಗಳ ಮೂಲಕ ಪರಿಶೋಧಿಸುವುದು ಸೃಜನಾತ್ಮಕತೆ, ಅರಿವು, ಅಳತೆ ಮತ್ತು ದಾಖಲಿಸುವ ಸಾಮರ್ಥ್ಯಗಳನ್ನು ಸುಧಾರಿಸುವುದು.



ಮಾಡಿ ನೋಡೋಣ

ಸರಳ ಪ್ರಯೋಗಗಳ ಮೂಲಕ ಕಲ್ಪನೆ ವೀಕ್ಷಣೆ ತಾರ್ಕಿಕತೆ ಮತ್ತು ತೀರ್ಮಾನ ಮುಂತಾದ ಕೌಶಲ್ಯಗಳನ್ನು ಪ್ರೋತ್ಸಾಹಿಸುವುದು.



ಚಟುವಟಿಕೆಗಳ ಸಮಯ

ಆಟಗಳು, ಗುಂಪು ಚಟುವಟಿಕೆಗಳ ಮೂಲಕ ಪರಿಶೋಧನೆ ಸಹಕಾರ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುವುದು.

ಎರಡನೇ ಅವಧಿ ಪಠ್ಯಪುಸ್ತಕದಲ್ಲಿ ಎರಡು ಘಟಕಗಳಲ್ಲಿ ಪ್ರಗತಿಶೀಲ ಕಲಿಕಾ ವಿಧಾನವನ್ನು ಅನುಸರಿಸಲಾಗಿದೆ.

1. ನಮ್ಮ ಸುತ್ತಮುತ್ತಲಿನ ಸಸ್ಯಗಳು



- ಸಸ್ಯಗಳ ಬೆಳವಣಿಗೆ, ಅದಕ್ಕೆ ಬೇಕಾದ ಅಗತ್ಯಗಳು, ಕಾರ್ಯಗಳು, ರೂಪಾಂತರಗಳು ಮತ್ತು ಹೊಂದಾಣಿಕೆಗಳನ್ನು ಪರಿಶೀಲಿಸುತ್ತದೆ.
- ಸಾಮಾನ್ಯ ಮರಗಳನ್ನು ಹೋಲಿಕೆ ಮಾಡುತ್ತದೆ, ಮರಗಳ ಕುರಿತು ಸರಳ ಅಧ್ಯಯನಗಳನ್ನು ನಡೆಸುತ್ತದೆ ಹಾಗೂ ವೀಕ್ಷಣೆ ಮತ್ತು ತನಿಖಾ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತದೆ.
- ಮರಗಳು ಮತ್ತು ಇತರ ಸಸ್ಯಗಳ ಬಗ್ಗೆ ಕಾಳಜಿ ವಹಿಸುವ ಮನೋಭಾವವನ್ನು ರೂಢಿಸಿಕೊಳ್ಳುತ್ತದೆ.

2. ನಾವು ಸೇವಿಸುವ ಆಹಾರ



- ಸಸ್ಯದ ವಿವಿಧ ಭಾಗಗಳಿಂದ ಪಡೆಯುವ ಆಹಾರವನ್ನು ಗುರುತಿಸುತ್ತದೆ.
- ಅಡುಗೆಯ ಪದಾರ್ಥಗಳನ್ನು ಅವುಗಳ ತಯಾರಿಕಾ ಸಾಮಗ್ರಿಗಳೊಂದಿಗೆ ಸಂಬಂಧ ಕಲ್ಪಿಸುತ್ತದೆ.
- ಕೃಷಿಭೂಮಿಯಿಂದ ತಟ್ಟೆಗೆ ಆಹಾರವು ತಲುಪುವ ಪ್ರಕ್ರಿಯೆಯ ಮಹತ್ವವನ್ನು ಅರಿಯುತ್ತದೆ.
- ಸಮತೋಲಿತ ಆಹಾರದಲ್ಲಿರುವ ಮೂರು ಆಹಾರ ಗುಂಪುಗಳನ್ನು ಅರ್ಥಮಾಡಿಕೊಳ್ಳುತ್ತದೆ.
- ಆರೋಗ್ಯಕರ ಆಹಾರ ಸೇವನೆಯ ಅಭ್ಯಾಸಗಳನ್ನು ಪಾಲಿಸುತ್ತದೆ.

ಮೌಲ್ಯಮಾಪನ ಮತ್ತು ಕಲಿಕೆಯ ಪ್ರಗತಿಗೆ ಸಹಾಯಕವಾಗುವಂತವುಗಳು.



ಕಲಿಕಾ ಪಯಣ

ಸರಳ ಸೂಕ್ಷ್ಮವಾದ ವೀಕ್ಷಣೆ ಮತ್ತು ಚಟುವಟಿಕೆಗಳ ಆಧಾರದ ಮೇಲೆ ಪ್ರಶ್ನೆಗಳ ಮೂಲಕ ಮಕ್ಕಳ ಅರ್ಥೈಸುವಿಕೆಯನ್ನು ಮೌಲ್ಯಮಾಪನ ಮಾಡುವುದು ಕಲಿಕೆಯ ಪ್ರಗತಿಯನ್ನು ವಿಶೇಷ ಗಮನ ಅಗತ್ಯವಿರುವ ಭಾಗಗಳನ್ನು ಕಂಡುಹಿಡಿಯಲು ಸಹಾಯಕವಾಗುತ್ತದೆ.



ನಾನು ಕಲಿತದ್ದು

ಮಕ್ಕಳು ಕಲಿತ ಮುಖ್ಯ ಸಾರಾಂಶಗಳನ್ನು ಸ್ಮರಿಸಲು ಯೋಚಿಸಲು ಸಹಾಯಕವಾಗುತ್ತದೆ.ಇನ್ನೂ ಕಲಿಕೆಯನ್ನು ಅನ್ವೇಷಣೆ ಮಾಡಲು ಉತ್ತಮ ಪಡಿಸಲು ಸಹಕರಿಸುತ್ತವೆ.



ನನ್ನಿಂದ ಸಾಧ್ಯ

ಸರಳ ಮೌಖಿಕ ಬರವಣಿಗೆ ಚಟುವಟಿಕೆಗಳು ಕಾರ್ಯಯೋಜನೆ ಮತ್ತು ದೈನಂದಿನ ಜೀವನದ ಚಟುವಟಿಕೆಗಳ ಮೂಲಕ ಕಲಿತದ್ದನ್ನು ಅನ್ವಯಿಸುವ ಅವಕಾಶವನ್ನು ಒದಗಿಸುತ್ತದೆ. ಆತ್ಮವಿಶ್ವಾಸ ಮತ್ತು ಸ್ವಯಂನಿರ್ದೇಶಿತ ಕಲಿಕೆಯನ್ನು ಸುಧಾರಿಸುತ್ತದೆ.

ಈ ಪಠ್ಯಪುಸ್ತಕವೂ ದೈನಂದಿನ ಜೀವನದೊಂದಿಗೆ ವಿಜ್ಞಾನವನ್ನು ಸಂಪರ್ಕಿಸಿ ಸಂತಸದಿಂದ ಅರ್ಥೈಸಿಕೊಂಡು ಕಲಿಯುವುದನ್ನು ಗುರಿಯಾಗಿಸಿಕೊಂಡಿದೆ ಮಕ್ಕಳ ಮೌಲ್ಯಗಳನ್ನು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸು ಪಡಿಸಲು ಅವಕಾಶಗಳನ್ನು ಕೊಡುವುದರ ಮೂಲಕ ಅವರ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗಿದೆ ಇದು ಮಕ್ಕಳನ್ನು ಉತ್ಸಾಹಭರಿತ ವಿದ್ಯಾರ್ಥಿಗಳನ್ನಾಗಿಯೂ ಜವಾಬ್ದಾರಿಯುತ ಸಮಾಜದ ಸದಸ್ಯರನ್ನಾಗಿಯೂ ಅಭಿವೃದ್ಧಿ ಪಡಿಸಲು ಸಹಕಾರಿಯಾಗಿದೆ.

ಪರಿವಿಡಿ

ಘಟಕ – 1



ನಮ್ಮ ಸುತ್ತಮುತ್ತಲಿನ ಸಸ್ಯಗಳು

69

ಘಟಕ – 2

ನಾವು ತಿನ್ನುವ ಆಹಾರ

99



ZX5JW e-book

WP1KK i-book

CS3OY THB

SV4KO Assessment

1 ನಮ್ಮ ಸುತ್ತಮುತ್ತಲಿನ ಸಸ್ಯಗಳು

ಒಂದು ಸಸ್ಯದ ಅಗತ್ಯ

CZ8YR

ಗಮನಿಸಿ ಮತ್ತು ಚರ್ಚಿಸಿ

ಒಂದು ದಿನ ಬೆಳಗ್ಗೆ ಯಾಳಿನಿ ತನ್ನ ತೋಟದ ಸುತ್ತಲೂ ನಡೆಯುತ್ತಿದ್ದಳು ಆಗ ತೋಟದಲ್ಲಿ ಒಂದು ಈರುಳ್ಳಿ ಅಳುತ್ತಿದ್ದನ್ನು ನೋಡಿ ಕೇಳಿದಳು.



ಆ. ನಾಲ್ವರು ಸ್ನೇಹಿತರ ರಹಸ್ಯವನ್ನು ಬಿಡಿಸಲು ಯಾಳಿನಿಗೆ ಸಹಾಯ ಮಾಡಿ.

ಸುಳಿವು 1	ಸುಳಿವು 2	ಸುಳಿವು 3	ಸುಳಿವು 4
ನಾನು ಹರಿಯುತ್ತೇನೆ ನಾನು ಸ್ಪಷ್ಟ ಮತ್ತು ಬಣ್ಣ ರಹಿತ ನಾನು ಯಾರು?	ನಾನು ದಿನವಿಡೀ ಆಕಾಶದಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತೇನೆ ನಾನು ಯಾರು?	ನಾನು ಕಂದು ಬಣ್ಣದ ವಸ್ತು ನಿಮ್ಮ ಪಾದಗಳ ಕೆಳಗೆ ಇದ್ದೇನೆ ನಾನು ಯಾರು?	ನೀವು ನನ್ನನ್ನು ನೋಡಲು ಸಾಧ್ಯವಿಲ್ಲ ಆದರೆ ನನ್ನನ್ನು ಅನುಭವಿಸಬಹುದು ನಾನು ಯಾರು?
_____	_____	_____	_____

ನೀವು ಈ ನಾಲ್ವರು ಸ್ನೇಹಿತರನ್ನು ಪ್ರಮುಖರೆಂದು ಭಾವಿಸುತ್ತೀರಾ? ಇವರಲ್ಲಿ ಒಬ್ಬ ಸ್ನೇಹಿತ ಕಾಣೆಯಾದರೆ ಏನಾಗಬಹುದು?



ಊಹಿಸುವ ಬದಲು ನಮ್ಮ ಆಲೋಚನೆಗಳನ್ನು ಪರೀಕ್ಷಿಸೋಣ.

ಮಾಡು ಮತ್ತು ಗಮನಿಸು

ಅಗತ್ಯವಿರುವ ಸಾಮಗ್ರಿಗಳು : ನಾಲ್ಕುಪಾರದರ್ಶಕ ಲೋಟಗಳು ಬೀಜಗಳು ಮಣ್ಣು ನೀರು ಹೆಸರುಪಟ್ಟಿ (ಲೇಬಲ್‌ಗಳು).

ನನಗೆ ನಾಲ್ವರು ಸ್ನೇಹಿತರಿದ್ದಾರೆ ನೀರು + ಮಣ್ಣು + ಸೂರ್ಯನ ಬೆಳಕು + ಗಾಳಿ



ಎ

ಬಿ



ನನ್ನ ಬಳಿ ನೀರಿಲ್ಲ. ನನಗೆ ಮಣ್ಣು + ಸೂರ್ಯನ ಬೆಳಕು + ಗಾಳಿ ಇದೆ.

ನನಗೆ ಸೂರ್ಯನ ಬೆಳಕು ಇಲ್ಲ, ನನ್ನ ಬಳಿ ಮಣ್ಣು + ನೀರು + ಗಾಳಿ ಇದೆ (ಕಪ್ಪು ಬಣ್ಣದ ಕಪಾಟಿನಲ್ಲಿ ಇರಿಸಿ).



ಸಿ

ಡಿ



ನನ್ನ ಬಳಿ ಮಣ್ಣು ಇಲ್ಲ. ನನ್ನ ಬಳಿ ನೀರು + ಸೂರ್ಯನ ಬೆಳಕು + ಗಾಳಿ ಇದೆ.

ನೀವು ಗಮನಿಸುವ ಮೊದಲು ಯಾವುದು ಉತ್ತಮವಾಗಿ ಬೆಳೆಯುತ್ತದೆ ಎಂದು ಊಹಿಸಿ?(✓) ತಪ್ಪು (✗) ಗುರ್ತಿಸು.

ಊಹಿಸಿ	ಲೋಟ ಅ	ಲೋಟ ಆ	ಲೋಟ ಇ	ಲೋಟ ಈ
ಚೆನ್ನಾಗಿ ಬೆಳೆಯುತ್ತದೆ (✓) / ಚೆನ್ನಾಗಿ ಬೆಳೆಯುವುದಿಲ್ಲ (✗)				

ನೀವು ಏಕೆ ಹಾಗೆ ಯೋಚಿಸುತ್ತೀರಾ?

ಶಿಕ್ಷಕರ ಟಿಪ್ಪಣಿ

ಪ್ರತಿಯೊಂದು ಲೋಟಕ್ಕೆ ಅಗತ್ಯವಿರುವ ಸ್ಥಿತಿಗಳನ್ನು ಕಾಪಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡಿ.

ವೀಕ್ಷಣಾ ದಾಖಲೆ

ಲೋಟಗಳನ್ನು ಗಮನಿಸಿ 3 ಮತ್ತು 7 ನೇ ದಿನದಂದು ಪ್ರತಿಯೊಂದು ಲೋಟದಲ್ಲಿ ನೀವು ವೀಕ್ಷಣೆ ಮಾಡಿದ್ದನ್ನು ದಾಖಲಿಸಿ.

ದಿನ	ಲೋಟ ಅ	ಲೋಟ ಆ	ಲೋಟ ಇ	ಲೋಟ ಈ
ದಿನ 3				
ದಿನ 7				

ನಾಲ್ಕು ಲೋಟಗಳಲ್ಲಿರುವ ಸಸ್ಯಗಳನ್ನು ಹೋಲಿಕೆ ಮಾಡಿ.

ವೈಶಿಷ್ಟವನ್ನು ಗಮನಿಸಿ	ಲೋಟ ಎ	ಲೋಟ ಬಿ	ಲೋಟ ಸಿ	ಲೋಟ ಡಿ
ಬೀಜ ಮೊಳಕೆ ಒಡೆದಿದೆ (ಹೌದು / ಇಲ್ಲ)				
ಸಸ್ಯದ ಎತ್ತರ (ಎತ್ತರ/ ಮಧ್ಯಮ / ಸಣ್ಣ) ಮೊಳಕೆ ಇಲ್ಲ				
ಎಲೆಯ ಬಣ್ಣ (ಹಸಿರು / ತಿಳಿಹಸಿರು / ಹಳದಿ) ಮೊಳಕೆ ಇಲ್ಲ				
ಕಾಂಡದ ಸ್ಥಿತಿ (ಬಲವಾದ/ ದುರ್ಬಲವಾದ) ಮೊಳಕೆ ಇಲ್ಲ				
ಒಟ್ಟಾರೆ ಬೆಳವಣಿಗೆ (ಒಳ್ಳೆಯ / ಸಾಕಷ್ಟು / ಕಳಪೆ) ಮೊಳಕೆ ಇಲ್ಲ.				

ಸಸ್ಯ ವಿಜ್ಞಾನಿಯಾಗಿ.

ಇಲ್ಲಿಯವರೆಗೆ ಮಾಡಿದ ಪ್ರಯೋಗಗಳಲ್ಲಿ ನಿಮ್ಮ ವೀಕ್ಷಣೆಗಳನ್ನು ನೋಡಿ ಸರಿಯಾದ ಉತ್ತರಕ್ಕೆ (✓) ಗುರುತು ಹಾಕಿ.

1. ಯಾವ ಲೋಟ ಉತ್ತಮ ಬೆಳವಣಿಗೆಯನ್ನು ಹೊಂದಿದೆ. ಅ ☐ ಆ ☐ ಇ ☐ ಈ ☐

2. ಸಸ್ಯ ಚೆನ್ನಾಗಿ ಬೆಳೆಯಲು ಯಾವುದು ಸಹಾಯ ಮಾಡಿತು?

   ☐ ನೀರು ಮಾತ್ರ
   ☐ ಮಣ್ಣು ಮಾತ್ರ
   ☐ ಸೂರ್ಯನ ಬೆಳಕು ಮಾತ್ರ
   ☐ ನೀರು, ಸೂರ್ಯನ ಬೆಳಕು, ಗಾಳಿ ಮತ್ತು ಮಣ್ಣು

3. ಒಂದು ಸ್ಥಿತಿ ಕಾಣೆಯಾದಾಗ ಏನಾಯಿತು?

   ☐ ಸಸ್ಯವು ಬೆಳೆಯಲಿಲ್ಲ
   ☐ ಸಸ್ಯವು ಸ್ವಲ್ಪಮಟ್ಟಿಗೆ ಬೆಳೆಯಿತು
   ☐ ಸಸ್ಯವು ಚೆನ್ನಾಗಿ ಬೆಳೆಯುತ್ತದೆ

ವೀಕ್ಷಣೆಯಿಂದ (ಅವಲೋಕನ) ನಾನು ಇದನ್ನು ತೀರ್ಮಾನಿಸುತ್ತೇನೆ.



ತೀರ್ಮಾನ: ಸಸ್ಯಗಳಿಗೆ ಅಗತ್ಯ ಇರುವುದು _____, _____

ಮತ್ತು _____, _____ ಸದೃಢವಾಗಿ ಬೆಳೆಯಲು.

ಪ್ರಯೋಗದ ನಡೆ

ನಿಮ್ಮ ಶಾಲೆ ಅಥವಾ ಮನೆಯಲ್ಲಿ ಒಂದು ಸಸ್ಯವನ್ನು ಹುಡುಕಿ ನಂತರ ಅದನ್ನು ಎಚ್ಚರಿಕೆಯಿಂದ ಗಮನಿಸಿ. ಸರಿ (✓) ಗುರುತು ಹಾಕಿ.



ವೀಕ್ಷಣೆ		
ಸೂರ್ಯನ ಬೆಳಕನ್ನು ಪಡೆದುಕೊಳ್ಳುತ್ತದೆ	ಹೌದು ◯	ಇಲ್ಲ ◯
ಮಣ್ಣು ತೇವವಾಗಿರುತ್ತದೆ	ಹೌದು ◯	ಇಲ್ಲ ◯
ಎಲೆಗಳು ಹಸಿರಾಗಿರುತ್ತದೆ	ಹೌದು ◯	ಇಲ್ಲ ◯
ಆರೋಗ್ಯಕರ ಸಸ್ಯ	ಹೌದು ◯	ಇಲ್ಲ ◯

ಕೆಳಗೆ ಕೊಟ್ಟಿರುವ ಪದಪುಂಜದಿಂದ ಸೂಕ್ತವಾದ ಪದಗಳನ್ನು ಆರಿಸಿ ವಾಕ್ಯಗಳನ್ನು ಪೂರ್ಣಗೊಳಿಸಿ.

ಪದಪುಂಜ

ಹಸಿರು ಎಲೆಗಳು ಒಣಗಿದ ಎಲೆಗಳು ಹಳದಿ ಎಲೆಗಳು ತೇವಾಂಶವುಳ್ಳ
ಉಳ್ಳ ಮಣ್ಣು ಒಣಮಣ್ಣು ಸಾಕಷ್ಟು ನೀರು ಸಾಕಷ್ಟು ಸೂರ್ಯನ ಬೆಳಕು

ಸಸ್ಯವು ಆರೋಗ್ಯಕರವಾಗಿದೆ ಎಂದು ನಾನು ಭಾವಿಸುತ್ತೇನೆ ಏಕೆಂದರೆ ಅದು _____,
_____ ಮತ್ತು _____, _____ ಹೊಂದಿದೆ.

ಬೀಜಗಳಿಲ್ಲದೆ ಸಸ್ಯಗಳು ಬೆಳೆಯಬಹುದೇ?

ಗಮನಿಸಿ ಮತ್ತು ಚರ್ಚಿಸಿ



ಕೆಲವು ಸಸ್ಯಗಳು ತಮ್ಮ ಕಾಂಡಗಳಿಂದ ಭಾಗಗಳಿಂದ ಬೆಳೆಯಬಹುದು.



ಯಾಳಿನಿ ಮಣ್ಣಿನಲ್ಲಿ ದಾಸವಾಳದ ಕಾಂಡವನ್ನು ನೋಡಿದಳು ಕೆಲವು ದಿನಗಳ ನಂತರ ಹೊಸ ಎಲೆಗಳ ಚಿಗುರಿದವು?



ದಾಸವಾಳದ ಕಾಂಡದ ತುಂಡು



ಮಣ್ಣಿನಲ್ಲಿ ನೆಡಲಾಗಿದೆ.

ಹೊಸ ದಾಸವಾಳದ ಸಸ್ಯ ಬೆಳೆಯುತ್ತದೆ

- ಕೆಲವು ಸಸ್ಯಗಳು ಬೀಜಗಳಿಲ್ಲದೆಯೂ ಬೆಳೆಯಬಹುದು.
- ರೈತರು ಮತ್ತು ತೋಟಗಾರರು ಸಸ್ಯಗಳನ್ನು ಬೆಳೆಸಲು ಈ ವಿಧಾನವನ್ನು ಬಳಸುತ್ತಾರೆ.

ಸಸ್ಯದ ಭಾಗಗಳ ರಹಸ್ಯ ಕೆಲಸಗಳು

OX5QJ

ಗಮನಿಸಿ ಮತ್ತು ಚರ್ಚಿಸಿ

ಒಂದು ದಿನ ಯಾಳಿನಿ ಮಾವಿನ ತೋಟದಲ್ಲಿ ಓಡುತ್ತಿದ್ದಾಗ, ಒಂದು ಮಾವಿನ ಮರ ಅವಳೊಂದಿಗೆ ಮಾತನಾಡಿತು.



ಬೇರು



ನಾನು ನೀರನ್ನು ಹೀರಿಕೊಂಡು ಮಣ್ಣನ್ನು ಹಿಡಿದಿಟ್ಟುಕೊಳ್ಳುತ್ತೇನೆ.

ಕಾಂಡ



ನಾನು ಸಸ್ಯದ ಎಲ್ಲಾ ಭಾಗಗಳಿಗೆ ನೀರು ಮತ್ತು ಆಹಾರವನ್ನು ಸಾಗಿಸುತ್ತೇನೆ

ಎಲೆಗಳು



ನಾನು ಆಹಾರವನ್ನು ತಯಾರಿಸುತ್ತೇನೆ.

ಹೂವು



ನಾನು ಹಣ್ಣುಗಳು ಮತ್ತು ಬೀಜಗಳನ್ನು ತಯಾರಿಸಲು ಸಹಾಯ ಮಾಡುತ್ತೇನೆ.

ಹಣ್ಣು



ನಾನು ಬೀಜಗಳನ್ನು ರಕ್ಷಿಸುತ್ತೇನೆ.

ಸಸ್ಯಗಳು ತಮ್ಮದೇ ಆಹಾರವನ್ನು ತಾವೇ ತಯಾರಿಸುತ್ತವೆ ಮತ್ತು ಹೆಚ್ಚುವರಿ ಆಹಾರವು ಬೇರುಗಳು, ಕಾಂಡಗಳು, ಹಣ್ಣುಗಳು ಮತ್ತು ಬೀಜಗಳಲ್ಲಿ ಸಂಗ್ರಹವಾಗುತ್ತದೆ.

ಮಾಡು ಮತ್ತು ಗಮನಿಸು

ಮರುದಿನ ಮನೆಯ ಮರದ ಕೆಲಸಗಳನ್ನು ತನ್ನ ಶಿಕ್ಷಕರ ಜೊತೆ ಹಂಚಿಕೊಂಡಳು. ಅವರು ಅವುಗಳನ್ನು ಒಂದೊಂದಾಗಿ ತನಿಖೆ ಮಾಡಿದರು.

ತನಿಖೆ – 1

ಪ್ರಶ್ನೆ : ಬೇರುಗಳು ಮಣ್ಣಿನಲ್ಲಿ ಬೆಳೆದು ಅದನ್ನು ಒಟ್ಟಿಗೆ ಹಿಡಿದಿಡಲು ಸಹಾಯ ಮಾಡುತ್ತವೆಯೇ?

ಅ) ನನಗೆ ಏನು ಬೇಕು?

ಒಂದು ಕಾಗದದ ಲೋಟ, ತೇವಾಂಶವುಳ್ಳ ಮಣ್ಣು, ಮೆಂತ್ಯ ಬೀಜಗಳು, ನೀರು, ತೆಳುವಾದ ಪಾರದರ್ಶಕ ಹಾಳೆ.



ಆ) ನಾನು ಏನು ಮಾಡಬೇಕು ಬದುಕಬೇಕು?

1. ಲೋಟವನ್ನು ತೇವಾಂಶವುಳ್ಳ ಮಣ್ಣಿನಿಂದ ತುಂಬಿರಿ ಮತ್ತು ನಿಧಾನವಾಗಿ ಮಣ್ಣನ್ನು ಕೈಯಿಂದ ಅದುಮ ಬೇಕು.
2. ಲೋಟದ ಒಂದು ಬದಿಯಲ್ಲಿ ಸಣ್ಣ ಕಿಟಕಿಯನ್ನು ಮಾಡಿ ಅದನ್ನು ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಿ.
3. ಕಿಟಕಿಯ ಬಳಿ ಕೆಲವು ಮೆಂತ್ಯ ಬೀಜಗಳನ್ನು ನೆಡಿ.
4. ನಿಯಮಿತವಾಗಿ ನೀರನ್ನು ಹಾಕಿ.
5. ಒಂದು ವಾರದ ನಂತರ ನೋಟವನ್ನು ಗಮನಿಸಿ.

ಇ) ನಾನು ಏನು ನೋಡಿದೆ? ಚಿತ್ರ ಬಿಡಿಸಿ.

ಚಿತ್ರ ಬಿಡಿಸಿ

ಈ) ತೀರ್ಮಾನ

ಈ ಪ್ರಯೋಗದಿಂದ

ಅದು ಮಣ್ಣಿನಲ್ಲಿ _____ ಬೆಳೆದು ಮಣ್ಣನ್ನು ಹಿಡಿದು ನೇರವಾಗಿ ನಿಲ್ಲಲು ಸಹಾಯ ಮಾಡುತ್ತದೆ ಎಂದು _____ ನಾನು ಊಹಿಸುತ್ತೇನೆ.

ಶಿಕ್ಷಕರ ಟಿಪ್ಪಣಿ ಈ ಸಂಶೋಧನೆಯನ್ನು ಮಾಡಲು ಮಕ್ಕಳಿಗೆ ಸಹಾಯ ಮಾಡಿ.

ಮಣ್ಣಿಲ್ಲದೆ ಬೇರೆಗಳು ಬೆಳೆಯಬಹುದೇ.

ಇದನ್ನು ಪರಿಶೀಲಿಸಲು ಪ್ರಯತ್ನಿಸಿ
ಒಂದು ಬೇರು ಸಹಿತ ಈರುಳ್ಳಿಯನ್ನು ನೀರು ಹಾಕಿದ ಲೋಟದ ಮೇಲೆ ಇರಿಸಿ ಎರಡು ವಾರಗಳವರೆಗೆ ಗಮನಿಸಿ.



ದಿನ - 1



ಒಂದು ವಾರಗಳ ನಂತರ

ಇದರಿಂದ ಸ್ವಲ್ಪ ದಿನಗಳವರೆಗೆ _____ ಇಲ್ಲದೆ ಈರುಳ್ಳಿ ಬೇರುಗಳು ಬೆಳೆಯಬಹುದು ಎಂದು ನಾನು ಊಹಿಸುತ್ತೇನೆ.

ಮಾಡು ಮತ್ತು ಕಲಿ

ಈ ನಾಲ್ಕು ಸಸ್ಯಗಳ ಕಾಂಡಗಳು ಮತ್ತು ಬೇರುಗಳನ್ನು ಎಚ್ಚರಿಕೆಯಿಂದ ಗಮನಿಸಿ.



(ಅ) ಮಾವು (ಆ) ಸೀಬೆ (ಇ) ತೆಂಗು (ಈ) ಭತ್ತ

1. ಕೋಷ್ಟಕವನ್ನು ಪೂರ್ಣಗೊಳಿಸಲು ಸರಿಯಾದ ಪೆಟ್ಟಿಗೆಯಲ್ಲಿ (✓) ಗುರುತು ಹಾಕಿ.

ಸಸ್ಯಗಳು	ತಾಯಿ ಬೇರು ಮತ್ತು ಸಣ್ಣ ಬೇರುಗಳು	ತಾಯಿ ಬೇರಿನ ಜೊತೆ ಗೊಂಚಲು ಬೇರು (ತಂತು ಬೇರು)	ಕೊಂಬೆಗಳನ್ನು ಹೊಂದಿರುವ ಒರೆದು ಮುಖ್ಯ ಕಾಂಡ	ಕೊಂಬೆಗಳು ಕಾಂಡ
ಅ. ಮಾವು				
ಆ. ಸೀಬೆ				
ಇ. ತೆಂಗು				
ಈ. ಭತ್ತ				

2. ಯೋಚಿಸಿ ಮತ್ತು ಹಂಚಿಕೊಳ್ಳಿ

ಬೇರಿನ ವಿಧ ಮತ್ತು ಕಾಂಡದ ನಡುವೆ ಇರುವ ಸಂಬಂಧವನ್ನು ಗಮನಿಸುತ್ತೀರಾ?
ಬೇರುಗಳು ಮತ್ತು ಕಾಂಡಗಳಲ್ಲಿ ನೀವು ಗಮನಿಸುವ ಮಾದರಿಯನ್ನು ಯೋಚಿಸಿ ಖಾಲಿ ಜಾಗದಲ್ಲಿ ಪೂರ್ಣಗೊಳಿಸಿ.

1. ಒಂದು ಮುಖ್ಯ ಕಾಂಡ ಮತ್ತು ಅದರಿಂದ ಕವಲು ಒಡೆಯುವ ಬೇರುಗಳನ್ನು ಹೊಂದಿರುವ ಸಸ್ಯಗಳು _____.
2. ಗೊಂಚಲು ಬೇರುಗಳನ್ನು ಹೊಂದಿರುವ ಸಸ್ಯಗಳು _____.
3. ಒಂದು ಮುಖ್ಯ ಕಾಂಡ ಮತ್ತು ಹಲವು ಕೊಂಬೆಗಳನ್ನು ಹೊಂದಿರುವ ಸಸ್ಯಗಳು _____.
4. ಕೊಂಬೆಗಳಿಲ್ಲದ ಕಾಂಡಗಳನ್ನು ಹೊಂದಿರುವ ಸಸ್ಯಗಳು _____.

ಶಿಕ್ಷಕರ ಟಿಪ್ಪಣಿ

ಎಲ್ಲಾ ಮಕ್ಕಳು ಬೇರು ಮತ್ತು ಕಾಂಡದ ಮಾದರಿಯ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳುತ್ತಾರೆ.

ಮಾಡು ಮತ್ತು ಗಮನಿಸು

ತನಿಖೆ - 2

ಬೇರುಗಳು ಮತ್ತು ಕಾಂಡಗಳು ಸಸ್ಯದಾದ್ಯಂತ ನೀರನ್ನು ಹೀರಿಕೊಳ್ಳಲು ಸಸ್ಯ ಸದೃಢವಾಗಿ ನಿಲ್ಲಲು ಸಹಾಯ ಮಾಡುತ್ತವೆಯೇ?



ಅ. ನಿನಗೆ ಏನು ಬೇಕು?

ಒಂದು ಲೋಟ ನೀರು ಕೆಂಪು ಅಥವಾ ನೀಲಿ ಶಾಯಿ ಬೇರುಗಳು ಮತ್ತು ಹೂವುಗಳನ್ನು ಹೊಂದಿರುವ ಕರ್ಣಕುಂಡಲ ಸಸ್ಯ (ಬಾಲ್ಸಾಮ್ ಅಥವಾ ಲ್ಯೂಕಾಸ್ಸಸ್ ಸಸ್ಯ)

ಆ. ನಾನು ಏನು ಮಾಡಬೇಕು?

1. ಒಂದು ಲೋಟಕ್ಕೆ ನೀರನ್ನು ತುಂಬಿಸಿ.
2. ಕೆಂಪು ನೀಲಿ ಶಾಯಿಯ ಕೆಲವು ಹನಿಗಳನ್ನು ಸೇರಿಸಿ.
3. ಸಸ್ಯದ ಬೇರುಗಳನ್ನು ಬಣ್ಣದ ನೀರಿನಲ್ಲಿ ಇರಿಸಿ ಒಂದು ರಾತ್ರಿ ಆ ಲೋಟದಲ್ಲಿಯೇ ಇರಲಿ.
4. ಮಾರನೆಯ ದಿನ ಕಾಂಡ, ಎಲೆಗಳು ಮತ್ತು ಹೂವುಗಳನ್ನು ಎಚ್ಚರಿಕೆಯಿಂದ ಗಮನಿಸಿ.

ಇ. ಬಣ್ಣದ ನೀರು ಎಲ್ಲಿ ಕಂಡುಬಂದಿದೆ? (✓) ಗುರುತು ಹಾಕಿ..

i. ಬೇರಿನಲ್ಲಿ ಮಾತ್ರ ☐

ii. ಬೇರು ಮತ್ತು ಕಾಂಡ ☐

iii. ಬೇರು, ಕಾಂಡ ಮತ್ತು ಎಲೆಗಳು ☐

iv. ಬೇರು, ಕಾಂಡ, ಎಲೆಗಳು, ಮತ್ತು, ಹೂವುಗಳು ☐

ಈ. ತೀರ್ಮಾನ.

ಈ ಪ್ರಯೋಗದಿಂದ ಇದು ಸಸ್ಯದಾದ್ಯಂತ ನೀರನ್ನು ಹೀರಿಕೊಳ್ಳಲು _____ ಮತ್ತು _____ ಚಲಿಸಲು ಸಹಾಯ ಮಾಡುತ್ತದೆ ಎಂದು ನಾನು ಊಹಿಸುತ್ತೇನೆ.

ಮನೆಯಲ್ಲಿ ಇದನ್ನು ಪ್ರಯತ್ನಿಸಿ



ಮಾಡು ಮತ್ತು ಕಲಿ

1. ಸಸ್ಯದ ಭಾಗಗಳನ್ನು ಹೆಸರಿಸಿ. ಅವುಗಳ ಕಾರ್ಯಗಳನ್ನು ಆರಿಸಿ ಬರೆಯಿರಿ.



ಭಾಗಗಳು : ಹೂವುಗಳು, ಹಣ್ಣು, ಕಾಂಡ, ಎಲೆ ಮತ್ತು ಬೇರು.

ಕಾರ್ಯಗಳು : ಹಣ್ಣುಗಳನ್ನು ಮತ್ತು ಬೀಜಗಳನ್ನು ಉತ್ಪಾದಿಸಲು,
ನೀರು ಮತ್ತು ಆಹಾರ ಚಲಿಸಲು ಸಹಾಯ ಮಾಡುತ್ತದೆ,
ನಮಗಾಗಿ ಆಹಾರವನ್ನು ಉತ್ಪಾದಿಸುತ್ತದೆ.
ಬೀಜವನ್ನು ರಕ್ಷಿಸುತ್ತದೆ, ನೀರನ್ನು ಹೀರಿಕೊಳ್ಳುತ್ತದೆ ಮತ್ತು ಮಣ್ಣನ್ನು ಹಿಡಿದಿಟ್ಟುಕೊಳ್ಳುತ್ತದೆ.

2. ಕಾಗದದ ಹಾಳೆಯ ಮೇಲೆ ಚಿತ್ರಿಸಿ.

ಕಾಂಡಗಳು ಮತ್ತು ಎಲೆಗಳನ್ನು ಹೊಂದಿರುವ ಸಸ್ಯಗಳನ್ನು ಹೊಂದಿರುವ ಉದ್ಯಾನವನ್ನು ಬರೆಯಿರಿ.



ಹೆಬ್ಬೆರಳಿನ ಮುದ್ರಣವನ್ನು ಬಳಸಿ ಹೂಗಳನ್ನು ತಯಾರಿಸಿ



ಹೆಬ್ಬೆರಳು ಗುರುತುಗಳನ್ನು ಬಳಸಿ ಕೀಟಗಳನ್ನು ರಚಿಸಿ



ಹೂವಿನಿಂದ ಹೂವಿಗೆ ಹಾರುವ ಕೀಟಗಳನ್ನು ತೋರಿಸುವ ಚುಕ್ಕಿಗೆ ರೇಖೆಗಳನ್ನು ಎಳೆಯಿರಿ



ಬೇರುಗಳು ಮತ್ತು ಕಾಂಡಗಳ ವಿಶೇಷ ಕೆಲಸಗಳು

ಗಮನಿಸಿ ಮತ್ತು ಚರ್ಚಿಸಿ

ಕೆಲವು ಸಸ್ಯಗಳಲ್ಲಿ, ಬೇರುಗಳು ಮತ್ತು ಕಾಂಡಗಳು ಸಸ್ಯವನ್ನು ಹಿಡಿದಿಟ್ಟುಕೊಳ್ಳುವುದು. ಕಾಂಡ ನೀರನ್ನು ಸಾಗಿಸುವುದಕ್ಕೆ ಸಹಾಯ ಮಾಡುತ್ತದೆ. ಅವುಗಳ ವಿಶೇಷ ಕೆಲಸಗಳನ್ನು ನಾವು ಅನ್ವೇಷಿಸೋಣ.

ಕೆಲವು ಬೇರುಗಳು ಯಾವ ವಿಶೇಷ ಕೆಲಸಗಳನ್ನು ಮಾಡುತ್ತವೆ?

ಕೆಲವು ಸಸ್ಯಗಳಲ್ಲಿ ಬೇರಿನಲ್ಲಿ ಆಹಾರವು ಸಂಗ್ರಹವಾಗುವುದರಿಂದ ಬೇರುಗಳ ದಪ್ಪವಾಗುತ್ತವೆ ಮತ್ತು ದೊಡ್ಡದಾಗುತ್ತವೆ. ಉದಾಹರಣೆಗೆ: ಕ್ಯಾರೆಟ್, ಬೀಟ್ರೂಟ್, ಮೂಲಂಗಿ.

ಈ ಬೇರುಗಳ ಮೇಲಿನ ಸೂಕ್ಷ್ಮವಾದ ಬೇರಿನ ಕೂದಲನ್ನು ಗಮನಿಸಿ.



ನಿಮಗೆ ಗೊತ್ತೇ?



ಆಲದ ಮರವು ನೇತಾಡುವ ಬೇರುಗಳನ್ನು ಹೊಂದಿದ್ದು ಅದು ಅದರ ದೊಡ್ಡ ಕೊಂಬೆಗಳನ್ನು ಬೆಂಬಲಿಸಲು ಸಹಾಯಮಾಡುತ್ತದೆ.

ಮಾಡು ಮತ್ತು ಕಲಿ

ನಾವುಕಾಗದದ ಕ್ಯಾರೆಟ್ ಮಾಡೋಣ.



ಗಮನಿಸಿ ಮತ್ತು ಚರ್ಚಿಸಿ

ಕೆಲವು ಕಾಂಡಗಳು ಯಾವ ವಿಶೇಷ ಕೆಲಸಗಳನ್ನು ಮಾಡುತ್ತವೆ?

ಕಾಂಡಗಳು ಆಹಾರವನ್ನು ಸಂಗ್ರಹಿಸಲು ಮತ್ತು ಸಾಕಷ್ಟು ನೀರು ಇಲ್ಲದಿರುವ ಸಸ್ಯಗಳಿಗೆ ಸಹಾಯ ಮಾಡಲು ನೆಲದಡಿಯಲ್ಲಿ ಬೆಳೆಯುತ್ತವೆ. (ಉದಾ, ಶುಂಠಿ, ಅರಿಶಿನ, ಈರುಳ್ಳಿ, ಆಲೂಗಡ್ಡೆ).

ಶುಂಠಿ, ಅರಿಶಿನ ಮತ್ತು ಈರುಳ್ಳಿಯ ಮೇಲಿನ 'ಚಿಪ್ಪು ಎಲೆಗಳನ್ನು' ಗಮನಿಸಿ. ಆಲೂಗಡ್ಡೆಯ ಮೇಲಿನ 'ಕಣ್ಣುಗಳನ್ನು' ಗಮನಿಸಿ.



ಆಲೂಗಡ್ಡೆಯೂ ಒಂದು ನೆಲದಡಿಯ ಕಾಂಡ. ಇದರ ಕಣ್ಣುಗಳು ಹೊಸ ಸಸ್ಯಗಳಾಗಿ ಬೆಳೆಯುತ್ತವೆ.

ಮಾಡು ಮತ್ತು ಗಮನಿಸು

ಹೇಗೆ ಆಲೂಗಡ್ಡೆ ಮೊಳಕೆ ಒಡೆಯುವುದು?



ಕಣ್ಣುಗಳೊಂದಿಗೆ ಆಲೂಗಡ್ಡೆ.

ಅದನ್ನು ಮಣ್ಣಿನಲ್ಲಿ ಇರಿಸಿ

ಸ್ವಲ್ಪ ನೀರು ಹಾಕಿ

ಮೊಳಕೆಗಳನ್ನು ಗಮನಿಸಿ

1. ಆಲೂಗಡ್ಡೆ ತನ್ನ _____ ನಿಂದ ಹೊಸ ಸಸ್ಯವಾಗಿ ಬೆಳೆಯುತ್ತದೆ ಸರಿ (✓) ಗುರುತು ಹಾಕಿ ಬರೆ
   ◯ ಎಲೆಗಳು ◯ ಕಣ್ಣುಗಳು ◯ ಹೂವುಗಳು

2. ಆಲೂಗಡ್ಡೆಯ ಕಣ್ಣುಗಳು ಅದರ_____ ಸರಿ (✓) ಗುರುತು ಹಾಕಿ ಬರೆ
   ◯ ಬೇರು ◯ ಕಾಂಡ ◯ ಎಲೆ

3. ಬೀಜದಿಂದ ಆಲೂಗಡ್ಡೆ ಬೆಳೆಯುತ್ತದೆಯೇ? ◯ ಹೌದು ◯ ಇಲ್ಲ

ಮಾಡು ಮತ್ತು ಕಲಿ

1. ಚಿತ್ರದಲ್ಲಿನ ಬೇರುಗಳು ಮತ್ತು ಕಾಂಡಗಳನ್ನು ಪಟ್ಟಿ ಮಾಡಿ.



ಕ್ಯಾರಟ್



ಕಬ್ಬು



ಈರುಳ್ಳಿ



ಆಲದ ಮರ

ಅದು ಹೇಗೆ ಬೆಳೆಯುತ್ತದೆ	ಬೇರುಗಳು	ಕಾಂಡಗಳು
ನೆಲದಡಿ		
ನೆಲದ ಮೇಲೆ		

2. ಕಾಂಡಗಳಿಗೆ ಹಸಿರು ಬಣ್ಣ ಹಚ್ಚಿ ಮತ್ತು ಬೇರುಗಳಿಗೆ ಕಂದು ಬಣ್ಣ ಹಚ್ಚಿ.













ವೀರನ ಪಯಾಣ

ವೀರ ಒಬ್ಬ ಕುತೂಹಲಕಾರಿ ಪುಟ್ಟ ಬೀಜವಾಗಿದ್ದ. ಒಂದು ದಿನ ಗಾಳಿ ಅವನನ್ನು ಎತ್ತಿಕೊಂಡು ಪರಿಪೂರ್ಣವಾದ ಮನೆಯನ್ನು ಹುಡುಕಲು ವಿವಿಧ ಸ್ಥಳಗಳಲ್ಲಿ ಕೊಂಡೊಯ್ಯಿತು. ಅವನ ಕಥೆಯನ್ನು ಓದೋಣ.

ಗಾಳಿಯು ಮೊದಲು ವೀರನನ್ನು ಬಿಸಿಯಾದ ಮರುಭೂಮಿಗೆ ಕೊಂಡೊಯ್ಯಿತು. ವೀರನು ಕಳ್ಳಿಯ ಗಿಡವನ್ನು ಬೇಟಿಯಾದನು.





ನಂತರ ಗಾಳಿಯು ವೀರನನ್ನು ಕರಾವಳಿಗೆ ಕೊಂಡೊಯ್ದಿತು ಅಲ್ಲಿ ಎತ್ತರವಾದ ತೆಂಗಿನ ಮರಗಳು ಇದ್ದವು.





ಗಾಳಿಯು ವೀರನನ್ನು ಶಾಂತವಾದ ಕೊಳಕ್ಕೆ ಕೊಂಡೊಯಿತು ವೀರನು ನೀರಿನಲ್ಲಿ ನೈದಿಲೆಯನ್ನು ಭೇಟಿಯಾದನು.





ಗಾಳಿಯು ವೀರನನ್ನು ತಣ್ಣನೆಯ ಹಿಮ ಪರ್ವತದ ಕಡೆ ಕೊಂಡೊಯ್ಯಿತು ವೀರನು ದೇವದಾರು (ಫೈನ್ ಮರ) ಮರವನ್ನು ಭೇಟಿಯಾಗಲು.





ಕೊನೆಗೆ ಗಾಳಿಯು ವೀರನನ್ನು ಒಂದು ಸಣ್ಣ ತೋಟಕ್ಕೆ ಕೊಂಡೊಯ್ಯಿತು. ಆ ತೋಟದಲ್ಲಿ ಮೃದುವಾದ ಮಣ್ಣು ಸಾಕಷ್ಟು ನೀರು ಮತ್ತು ಬೆಚ್ಚಗಿನ ಸೂರ್ಯನ ಬೆಳಕು ಇದ್ದಿತು. ಆದ್ದರಿಂದ ವೀರ ಆ ಮಣ್ಣಿನಲ್ಲಿ ಸಂತೋಷದಿಂದ ನೆಲೆಸಿದನು ಮತ್ತು ಆರೋಗ್ಯಕರವಾದ ಪುಟ್ಟ ಸಸ್ಯವಾಗಿ ಬೆಳೆಯಲು ಪ್ರಾರಂಭಿಸಿದನು.



ಮಾಡು ಮತ್ತು ಗಮನಿಸು

1. ಇದನ್ನು ಪ್ರಯತ್ನಿಸಿ!



ಅ. ನಿಮ್ಮ ಅವಲೋಕನ

ಯಾವ ಸ್ಪಂಜು ಇನ್ನೂ ಒದ್ದೆಯಾಗಿದೆ?



- ◯ ಮುಚ್ಚಿದ ಸ್ಪಂಜು
- ◯ ತೆರೆದ ಸ್ಪಂಜು

ಆ. ನಿಮ್ಮ ತೀರ್ಮಾನ

ಸ್ಪಂಜಿಗೆ ಯಾವ ಹೊದಿಕೆ ಸಹಾಯ ಮಾಡುತ್ತದೆ

- ◯ ಹೆಚ್ಚು ಸಮಯ ಒದ್ದೆ ಆಗಿರುವುದು
- ◯ ವೇಗವಾಗಿ ಒಣಗಿದೆ

ಇ. ನಿಮ್ಮ ಪರಸ್ಪರ ಸಂಬಂಧ

ಮುಚ್ಚಿದ ಸ್ಪಂಜಿನಂತೆ ಕಳ್ಳಿಯ ದಪ್ಪ ಹೊರ ಪೊರೆಕೆಯು (ಆಹಾರ ತಯಾರಿಸಲು / ನೀರನ್ನು ಹಿಡಿದಿಡಲು) _____ ಸಹಾಯ ಮಾಡುತ್ತದೆ.

2. ಇದನ್ನು ಪ್ರಯತ್ನಿಸಿ!



ಎರಡು ಎಲೆಗಳನ್ನು ತೆಗೆದುಕೊಳ್ಳಿ



ಒಂದು ಎಲೆಗೆ ತೆಂಗಿನ ಎಣ್ಣೆ ಹಚ್ಚಿ



ಎರಡೂ ಎಲೆಗಳನ್ನು ನೀರಿನಲ್ಲಿ ಅದ್ದಿ ಹೊರ ತೆಗೆಯಿರಿ.



ಎಲೆಗಳನ್ನು ಗಮನಿಸಿ

ಅ. ನಿಮ್ಮ ಅವಲೋಕನ

ನೀರು ಜಾರುತ್ತದೆ

- ◯ ಎಣ್ಣೆ ಹಚ್ಚಿದ ಎಲೆ
- ◯ ಎಣ್ಣೆ ಇಲ್ಲದ ಎಲೆ

ಆ. ನಿಮ್ಮ ತೀರ್ಮಾನ

ಎಣ್ಣೆಯುಕ್ತ ಮೇಲ್ಮೈ ಸಹಾಯ ಮಾಡುತ್ತದೆ

- ◯ ನೀರು ಅಂಟಿಕೊಳ್ಳುವುದನ್ನು ನಿಲ್ಲಿಸುತ್ತದೆ
- ◯ ಹೆಚ್ಚು ನೀರನ್ನು ಹೀರಿಕೊಳ್ಳುತ್ತವೆ
- ◯ ಬಣ್ಣವನ್ನು ಬದಲಾಯಿಸುತ್ತದೆ

ಇ. ನಿಮ್ಮ ಪರಸ್ಪರ ಸಂಬಂಧ

ಎಣ್ಣೆ ಹಚ್ಚಿದ ಎಲೆಯಂತಹ, ನೈದಿಲೆಯ ಎಲೆಯ ಮೇಣದ ಮೇಲ್ಮೈ ನೀರನ್ನು _____ ಸಹಾಯ ಮಾಡುತ್ತದೆ. (ಹೀರಿಕೊಳ್ಳಲು / ಜಾರಿಕೊಳ್ಳಲು).

ಮಾಡು ಮತ್ತು ಕಲಿ

1. ಇವುಗಳ ವಾಸಸ್ಥಾನದ ಹೆಸರುಗಳನ್ನು ಬರೆಯಿರಿ



ತೆಂಗಿನ ಮರ



ಕಡಲ ತೀರದ ಹುಲ್ಲು



ನೈದಿಲೆ



ದೇವದಾರು ಮರ



ಅಂತರಗಂಗೆ ಹೂವು



ಕಳ್ಳಿ ಗಿಡ

ಒಣ ಭೂಮಿಯಲ್ಲಿ	ನೀರಿನಲ್ಲಿ	ಗುಡ್ಡಗಾಡು ಪ್ರದೇಶದಲ್ಲಿ	ಸಮುದ್ರದ ತೀರದ ಮೇಲೆ

2. ಐದು ಸಸ್ಯಗಳ ಹೆಸರುಗಳನ್ನು ಹುಡುಕಿ ಮತ್ತು ವೃತ್ತ ಮಾಡಿ.

ತೆಂ	ಗಿ	ನ	ಮ	ರ	ಡಿ	ಲ್ಲು	ಥಿ	ಸ
ಅ	ಖಿ	ಟ	ಲ	ಥಿ	ದೇ	ಹು	ಜ	ದಿ
ಏ	ಅಂ	ಥಿ	ಉ	ಕಿ	ವ	ದ	ಱಿ	ತಿ
ಐ	ತ	ಎ	ಊ	ಖಿ	ದಾ	ರ	ಆ	ಏ
ಲಿ	ರ	ಲ	ಆ	ಸ	ರು	ತೀ	ಕ	ಥಿ
ಜ	ಗಂ	ಕಿ	ಥಿ	ಖ	ಮ	ಲ	ಳ್ಳಿ	ಲ
ಱಿ	ಗೆ	ಖಿ	ಲ	ತಿ	ರ	ಡ	ಗಿ	ಕಿ
ಆ	ಹೂ	ನೈ	ದಿ	ಲೆ	ಕಿ	ಕ	ಡ	ಖಿ

ನಮ್ಮ ಸುತ್ತಮುತ್ತಲಿನ ಮರಗಳು

ಗಮನಿಸಿ ಮತ್ತು ಚರ್ಚಿಸಿ

ಚಿತ್ರವನ್ನು ಗಮನಿಸಿ. ಇವುಗಳಲ್ಲಿ ನೀವು ಯಾವ ಮರಗಳನ್ನು ನೋಡಿದ್ದೀರಿ? ಅವುಗಳನ್ನು ಹೆಸರಿಸಿ.













ಮಾಡು ಮತ್ತು ಕಲಿ

1. ಕೊಟ್ಟಿರುವ ಒಗಟುಗಳನ್ನು ಓದಿ ಸಸ್ಯಗಳು ಗುರುತಿಸಿ.

ನಾನು ಉದ್ದವಾದ ಕಾಯಿಗಳನ್ನು ಹೊಂದಿದ್ದೇನೆ
ನಾನು ಸಾಂಬಾರಿಗೆ ರುಚಿಯನ್ನು ಸೇರಿಸುತ್ತೇನೆ
ನನ್ನ ಹೂಗಳು ಮತ್ತು ಎಲೆಗಳು ತುಂಬಾ
ಉಪಯುಕ್ತವಾಗಿದೆ.

ನಾನು ಯಾರು? ----------

ಯಾವುದಾದರೂ ಒಂದು ಮರದ ಬಗ್ಗೆ
ಸ್ವಂತವಾಗಿ ಒಗಟನ್ನು ಬರೆಯಿರಿ.

ಶಿಕ್ಷಕರ ಟಿಪ್ಪಣಿ

ರಸ್ತೆಗಳ ಪಕ್ಕದಲ್ಲಿ ನಾವು ಅನೇಕ ತಾಳೆ ಮರಗಳು ಮತ್ತು ತೆಂಗಿನ ಮರಗಳನ್ನು ನೋಡುತ್ತೇವೆ ಅವುಗಳ ವೈಶಿಷ್ಟ್ಯಗಳನ್ನು ಕೋಷ್ಟಕದಲ್ಲಿ ಹೋಲಿಕೆ ಮಾಡಿ.

2. ನಮ್ಮ ಸುತ್ತಮುತ್ತ ನಾವು ಅನೇಕ ತಾಳೆ ಮತ್ತು ತೆಂಗಿನ ಮರಗಳನ್ನು ನೋಡುತ್ತೇವೆ. ಅವುಗಳ ಲಕ್ಷಣಗಳನ್ನು ಕೋಷ್ಟಕದಲ್ಲಿ ಹೋಲಿಸಿ ನೋಡಿ.

ಪದಪುಂಜ

- ತೆಂಗಿನ ಕಾಯಿ
- ನಯವಾದ ಕಾಂಡ
- ಫ್ಯಾನ್ ಆಕಾರದ ಎಲೆಗಳು
- ತಾಳೆ ಹಣ್ಣು
- ಒರಟು ಕಾಂಡ
- ಗರಿಗಳಂತಹ ಎಲೆಗಳು
- ಕೊಂಬೆಗಳಿಲ್ಲ
- ಎತ್ತರವಾದ ಮರ
- ಸಣ್ಣ ಎಲೆಗಳ ಕಿರೀಟ
- ದೊಡ್ಡ ಎಲೆಗಳ ಕಿರೀಟ





ವೈಶಿಷ್ಟ್ಯತೆ	ತಾಳೆ ಮರ	ತೆಂಗಿನ ಮರ
ಎತ್ತರ		
ಕಾಂಡ		
ಕೊಂಬೆಗಳು		
ಎಲೆಗಳು		
ಮೇಲಾವರಣ (ಮರದ ಕಿರೀಟ)		
ಹಣ್ಣುಗಳು		

3. ಒಗಟನ್ನು ಓದಿ ಮತ್ತು ಕೊಟ್ಟಿರುವ ಜಾಗದಲ್ಲಿ ಹಣ್ಣನ್ನು ಚಿತ್ರಿಸಿ.

ಕಪ್ಪು ಬೀಜದೊಳಗೆ ಕೆಂಪು ಮತ್ತು ರಸಭರಿತವಾದ ದೊಡ್ಡ ಹಸಿರು ಹಣ್ಣು.

4. ಪ್ರಣತಿ ಶಾಲೆಗೆ ಹೋಗುವ ದಾರಿಯನ್ನು ನೋಡಿ. ನಕ್ಷೆಯಲ್ಲಿ ಮರಗಳನ್ನು ಹುಡುಕಿ ಮತ್ತು ಪದಪುಂಜವನ್ನು ಬಳಸಿ ಅವುಗಳ ಹೆಸರುಗಳನ್ನು ಬರೆ.

ಪದಪುಂಜ				
	ಸೀಮೆ ಹುಣಸೆ (Manila tamarind)	ಕಕ್ಕೆ ಮರ (Laburnum)	ಬುಗರಿ ಮರ (Portia)	ತಾಳೆ ಮರ (Palmyra)
	ಬೇವಿನ ಮರ (Neem)	ಹೊಂಗೆ ಮರ (Pongam)	ಹುಣಸೆ ಮರ (Tamarind)	ಅರಳಿ ಮರ (Peepul)



ಅವಳು ವೇಗವಾಗಿ ನಡೆಯುತ್ತ _____ ಮತ್ತು _____ ಮರದ ಹತ್ತಿರ ಬಂದು ತಲುಪುತ್ತಾಳೆ. ಅವಳು ಎಲೆಯಿಂದ ಆಟಿಕೆಯನ್ನು ಮಾಡಲು ಕೆಲವು ಎಲೆಗಳನ್ನು ಕೀಳುತ್ತಾಳೆ. ನಂತರ ಅವಳು _____ ಮರದ ಎಲೆಗಳನ್ನು ಕಿತ್ತು ಅದರ ಸುತ್ತಲೂ ಹಾಕುತ್ತಾಳೆ. ಅವಳು _____ ಮತ್ತು _____ ಮರಗಳ ನಡುವೆ ಇರುವ ಸೇತುವೆಯನ್ನು ದಾಟುತ್ತಾಳೆ. ಸುಂದರವಾದ ಹಳದಿ ಹೂವುಗಳನ್ನು ನೋಡಲು _____ ಮರದ ಹತ್ತಿರ ನಿಲ್ಲುತ್ತಾಳೆ. ಅಂತಿಮವಾಗಿ _____ ಮತ್ತು _____ ಮರಗಳನ್ನು ದಾಟಿದ ನಂತರ ಅವಳು ತನ್ನ ಸ್ನೇಹಿತನ ಮನೆಯನ್ನು ತಲುಪುತ್ತಾಳೆ.

ನಮ್ಮ ದೈನಂದಿನ ಜೀವನದಲ್ಲಿ ಸಸ್ಯಗಳು

ನಾವು ಮರಗಳನ್ನು ಏಕೆ ರಕ್ಷಿಸುತ್ತೇವೆ ಮತ್ತು ಸಂರಕ್ಷಿಸುತ್ತೇವೆ?

ಗಮನಿಸಿ ಮತ್ತು ಚರ್ಚಿಸಿ

ನಮ್ಮ ಜೀವನವು ಸಸ್ಯಗಳು ಮತ್ತು ಮರಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ.







ಶಿಕ್ಷಕರ ಟಿಪ್ಪಣಿ

ಚಿತ್ರಗಳನ್ನು ವೀಕ್ಷಿಸಲು ಮತ್ತು ಅವುಗಳ ಅರ್ಥವನ್ನು ಚರ್ಚಿಸಲು ಮಕ್ಕಳಿಗೆ ತಿಳಿಸಿ

ಮರಗಳು ಜೀವವನ್ನು ಉಳಿಸುತ್ತವೆ! ಪದಪುಂಜವನ್ನು ಬಳಸಿಕೊಂಡು ವಾಕ್ಯಗಳನ್ನು ಪೂರ್ಣಗೊಳಿಸಿ.

ಪದಪುಂಜ ಗಾಳಿ ಮಳೆ ಜೀವಿಗಳು ಮಣ್ಣು ನೀರು

ಅ. ಮರಗಳು _____ ಯನ್ನು ತರಲು ಸಹಾಯ ಮಾಡುತ್ತವೆ.

ಆ. ಹೆಚ್ಚಿನ ಮರಗಳು ಮಣ್ಣಿನಲ್ಲಿ _____ ಅನ್ನು ಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತವೆ.

ಇ. ಮರಗಳು ಧೂಳನ್ನು ಹಿಡಿದಿಟ್ಟುಕೊಳ್ಳುವ ಮೂಲಕ _____ ಯನ್ನು ಸ್ವಚ್ಛವಾಗಿಡಲು ಸಹಾಯ ಮಾಡುತ್ತವೆ.

ಈ. ಮರಗಳು ಭೂಮಿಯ ಮೇಲಿನ _____ ಅನ್ನು ಬೆಂಬಲಿಸುತ್ತವೆ.

ಉ. ಬೇರುಗಳು ಮರಗಳನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುತ್ತವೆ ಮತ್ತು ಅದು ನೀರಿನಲ್ಲಿ ಕೊಚ್ಚಿ ಹೋಗದಂತೆ _____ ತಡೆಯುತ್ತವೆ.

ಮರಗಳು ನಮಗೆ ಆಹಾರ, ಶುದ್ಧ ಗಾಳಿ, ನೀರು, ಆರೋಗ್ಯಕರ ಮಣ್ಣು ಮತ್ತು ಮಳೆಯನ್ನು ನೀಡುತ್ತವೆ ಜನರು ಪ್ರಾಣಿಗಳು ಮತ್ತು ಎಲ್ಲಾ ಜೀವಿಗಳು ಬದುಕಲು ಮತ್ತು ಬೆಳೆಯಲು ಸಹಾಯ ಮಾಡುತ್ತವೆ.

ನಿಮಗೆ ಗೊತ್ತೇ?

ಬಹಳ ಹಿಂದೆಯೇ ಜನರು ಕೆಲವು ಹಳ್ಳಿಗಳು ಮತ್ತು ಪಟ್ಟಣಗಳಿಗೆ ಅಲ್ಲಿ ಬೆಳೆದ ಮರಗಳ ಹೆಸರುಗಳನ್ನು ಇಡುತ್ತಿದ್ದರು. ಇಂದಿಗೂ ನಾವು ಅಂತಹ ಹೆಸರುಗಳನ್ನು ಕಾಣಬಹುದು ಉದಾರಣೆ: ಅರಳಿಕಟ್ಟೆ, ಆಲೂರು, ಸಂಪಿಗೆಪುರ, ಬೇವಿನತಾಳಪುರ ಇತ್ಯಾದಿ.

ಆಶ್ರಯವಾಗಿ ಮರ

ಮರವು ಪ್ರಾಣಿಗಳ ಜೀವನವನ್ನು ಹೇಗೆ ಬೆಂಬಲಿಸುತ್ತದೆ?

ಗಮನಿಸಿ ಮತ್ತು ಚರ್ಚಿಸಿ

ಒಂದು ಮರವು ಅನೇಕ ಜೀವಿಗಳಿಗೆ ನೆಲೆಯಾಗಿದೆ ವಿವಿಧ ರೀತಿಯ ಪ್ರಾಣಿಗಳು, ಕೀಟಗಳು ಇತ್ಯಾದಿ ಮರದ ವಿವಿಧ ಭಾಗಗಳಲ್ಲಿ ವಾಸಿಸುತ್ತವೆ.



ಯೋಚಿಸಿ ಮತ್ತು ಚರ್ಚಿಸಿ



- ಒಂದು ಮರವು ತನ್ನ ಎಲ್ಲಾ ಎಲೆಗಳನ್ನು ಕಳೆದುಕೊಂಡರೆ (ಉದುರಿಸಿದರೆ) ಆ ಮರವನ್ನು ಅವಲಂಬಿಸಿ ಬದುಕುವ ಪ್ರಾಣಿ ಮತ್ತು ಪಕ್ಷಿಗಳಿಗೆ ಉಂಟಾಗುವ ಸಮಸ್ಯೆ ಏನು?



- ಪಕ್ಷಿಯ ಗೂಡಿಗೂ ಮತ್ತು ಗೂಬೆಯ ವಾಸಸ್ಥಳಕ್ಕೂ ನಡುವಿನ ಪ್ರಮುಖ ವ್ಯತ್ಯಾಸಗಳೇನು?



ಮಾಡು ಮತ್ತು ಕಲಿ

1. ಚಿತ್ರವನ್ನು ಗಮನಿಸಿ ಸರಿಯಾದ ಪೆಟ್ಟಿಗೆಗಳಲ್ಲಿ ಪ್ರಾಣಿಗಳನ್ನು ಪಟ್ಟಿ ಮಾಡಿ ನಿಮಗೆ ಸಹಾಯ ಮಾಡಲು ಪದಪುಂಜವನ್ನು ಬಳಸಿ.

ಪದಪುಂಜ					
	ಕಾಗೆ	ಹಕ್ಕಿ	ಇರುವೆಗಳು	ಬಣ್ಣದ ಚಿಟ್ಟೆಗಳು	ಮೇಕೆ
	ಹದ್ದು	ಸೂರಕ್ಕಿ	ಕಂಬಳಿಹುಳು	ಜೇನುನೊಣಗಳು	ಹಲ್ಲಿ
	ಗಿಳಿ	ಅಳಿಲು	ಜೀರುಂಡೆಗಳು	ಶತಪದಿ	
	ಗುಬ್ಬಚ್ಚಿ	ಹಲ್ಲಿ	ಜೇಡರ ಹುಳು	ಸಹಸ್ರಪದಿ	
	ಮೈನಾ	ಮರಕುಟಿಗ	ಬಸವನಹುಳು	ಗೂಬೆ	
	ಹಸು	ಬಾವಲಿ	ಮೊಲಗಳು	ಚೇಳು	

ಮರದ ಮೇಲ್ಭಾಗ	ಕೊಂಬೆಗಳು ಮತ್ತು ಎಲೆಗಳು	ಮಧ್ಯದ ಭಾಗ (ಕಾಂಡ ಮತ್ತು ಕೊಂಬೆಗಳು)	ಮರದ ಬುಡ (ಬೇರುಗಳ ಹತ್ತಿರ)

ಶಿಕ್ಷಕರ ಟಿಪ್ಪಣಿ ಮರದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಪ್ರಾಣಿಗಳು ವಾಸಿಸುತ್ತವೆ ಎಂಬುದನ್ನು ತಿಳಿಸಿ.

2. ಗೂಡನ್ನು ತಯಾರಿಸಿ ಪಕ್ಷಿಗಳಿಗೆ ಸಹಾಯ ಮಾಡೋಣ.

ತ್ಯಾಜ್ಯ ರಟ್ಟಿನ ಪೆಟ್ಟಿಗೆಯನ್ನು ಬಳಸಿ ಸರಳವಾದ ಪಕ್ಷಿ ಗೂಡನ್ನು ನಿರ್ಮಿಸಿ ಮತ್ತು ಅದನ್ನು ಶಾಲಾ ಆವರಣದಲ್ಲಿ ಸುರಕ್ಷಿತವಾಗಿ ಮರದಲ್ಲಿ ನೇತುಹಾಕಿ.



1



2

ಚಿಕ್ಕ ಕಡ್ಡಿಯನ್ನು ಅಂಟಿಸಿ



3



ಮರದ ಅಧ್ಯಯನ



ವಿದ್ಯಾರ್ಥಿಯ ವಿವರಗಳು

ಹೆಸರು : _____

ತರಗತಿ : _____

ಶಾಲೆ : _____

ದಿನಾಂಕ : _____

ನಗರ / ಹಳ್ಳಿ / ಪಟ್ಟಣ: _____

ಭಾಗ ಅ – ಮರವನ್ನು ಗುರುತಿಸುವುದು

1. ಮರದ ಹೆಸರೇನು? _____

2. ಮರ ಎಲ್ಲಿ ಬೆಳೆಯುತ್ತದೆ? _____

☐ ಶಾಲಾ ಆವರಣ ☐ ಮನೆ ತೋಟ ☐ ಉದ್ಯಾನವನ

☐ ರಸ್ತೆ ಬದಿ ☐ ತೋಟ ☐ ಇತರೆ

3. ನೀವು ಮರವನ್ನು ಹೇಗೆ ಗುರುತಿಸುವಿರಿ? _____

☐ ಎಲೆಗಳು ☐ ಹೂವುಗಳು ☐ ಹಣ್ಣುಗಳು ☐ ತೊಗಟೆ ☐ ಯಾರೋ ನನಗೆ ಹೇಳಿದರು

ಭಾಗ ಆ – ಸಂಪೂರ್ಣವಾದ ಮರ.

4. ಒಂದು ಮರದ ಎತ್ತರವನ್ನು ನೀವು ಹೇಗೆ ವಿವರಿಸುತ್ತೀರಿ?

☐ ಚಿಕ್ಕದು ☐ ಮಧ್ಯಮ ☐ ಎತ್ತರ ☐ ಬಹಳ ಎತ್ತರವಾದ

ಭಾಗ ಇ – ಮರದ ಕಾಂಡ ಮತ್ತು ಮರದ ತೊಗಟೆ

5. ಮರವು ಎಷ್ಟು ಮುಖ್ಯ ಕಾಂಡಗಳನ್ನು ಹೊಂದಿದೆ? ☐ ಒಂದು ☐ ಒಂದಕ್ಕಿಂತ ಅಧಿಕ

6. ಕಾಂಡವು ದಪ್ಪವಾಗಿರುವುದೇ ಅಥವಾ ತೆಳ್ಳಗಾಗಿರುವುದೇ ☐ ದಪ್ಪವಾಗಿರುವುದು ☐ ತೆಳ್ಳಗಾಗಿರುವುದು

7. ನೀವು ಎರಡು ಕೈಗಳಿಂದ ಮರದ ಕಾಂಡವನ್ನು ಅಪ್ಪಿಕೊಳ್ಳಬಹುದೇ? ☐ ಹೌದು ☐ ಇಲ್ಲ

8. ತೊಗಟೆ ಯಾವ ಬಣ್ಣವನ್ನು ಹೊಂದಿದೆ? _____

9. ತೊಗಟೆಯನ್ನು ಮುಟ್ಟಿ ನಿಮಗೆ ಯಾವ ಅನುಭವವಾಗುತ್ತದೆ? ☐ ಮೃದು ☐ ಒರಟು ☐ ಕಠಿಣ

10. ತೊಗಟೆಯ ಮೇಲೆ ಬಿರುಕುಗಳು, ಗೆರೆಗಳ ಮಾದರಿಗಳು ಕಂಡು ಬರುತ್ತವೆಯೇ? ☐ ಹೌದು ☐ ಇಲ್ಲ

ಭಾಗ ಈ – ಎಲೆಗಳನ್ನು ಗಮನಿಸುವುದು

11. ಎಲ್ಲಾ ಎಲೆಗಳು ಒಂದೇ ಬಣ್ಣದಲ್ಲಿ ಇರುವುದೇ ☐ಹೌದು ☐ಇಲ್ಲ

12. ಎಲೆಗಳ ಗಾತ್ರವೇನು? ☐ಚಿಕ್ಕದು ☐ಮಧ್ಯಮ ☐ದೊಡ್ಡದು

13. ಎಲೆಗಳ ಆಕಾರ ಹೇಗಿರುತ್ತದೆ

☐ಗುಂಡಗಿನ ☐ಅಂಡಾಕಾರದ ☐ಉದ್ದನೆಯ ☐ಹೃದಯದ ಆಕಾರ ☐ಇತರೆ _____

14. ಎಲೆಗಳು ನಯವಾಗಿದೆಯೇ ಅಥವಾ ಒರಟಾಗಿವೆಯೇ ☐ಹೌದು ☐ಇಲ್ಲ

15. ಎಲೆಗಳನ್ನು ಜಜ್ಜಿದಾಗ ವಾಸನೆ ಬರುತ್ತದೆಯೇ? ☐ಹೌದು ☐ಇಲ್ಲ

16. ಮರದ ಮೇಲೆ ಚಿಗುರು ಎಲೆಗಳು ಇದೆಯೇ? ☐ಹೌದು ☐ಇಲ್ಲ

17. ಚಿಗುರು ಎಲೆಗಳು ಯಾವ ಬಣ್ಣದಲ್ಲಿ ಇವೆ? _____

18. ಮರದ ಮೇಲೆ ಒಣ ಅಥವಾ ಹಳದಿ ಎಲೆಗಳು ಇದೆಯೇ? ☐ಹೌದು ☐ಇಲ್ಲ

19. ಮರದ ಕೆಳಗೆ ಬಿದ್ದಿರುವ ಎಲೆಗಳು ನಿಮಗೆ ಕಾಣುತ್ತವೆಯೇ? ☐ಹೌದು ☐ಇಲ್ಲ

ಭಾಗ ಉ – ಹೂವುಗಳು, ಹಣ್ಣುಗಳು ಮತ್ತು ಬೀಜಗಳನ್ನು ಗಮನಿಸುವುದು

20. ಮರಗಳು ಹೂವುಗಳನ್ನು ಹೊಂದಿರುತ್ತವೆಯೇ? ☐ಹೌದು ☐ಇಲ್ಲ

21. ಹೂವುಗಳು ಯಾವ ಬಣ್ಣವನ್ನು ಹೊಂದಿವೆ? _____

22. ಹೂವುಗಳಿಗೆ ವಾಸನೆ ಇದೆಯೇ? ☐ಹೌದು ☐ಇಲ್ಲ

23. ಮರಗಳು ಹಣ್ಣುಗಳನ್ನು ಹೊಂದಿರುವುದೇ. ☐ಹೌದು ☐ಇಲ್ಲ

24. ಮರದ ಕೆಳಗೆ ಬಿದ್ದ ಹಣ್ಣುಗಳನ್ನು ನೀವು ನೋಡಿದ್ದೀರಾ. ☐ಹೌದು ☐ಇಲ್ಲ

25. ನೀವು ಬೀಜಗಳನ್ನು ಗಮನಿಸಿದ್ದೀರಾ? ☐ಹೌದು ☐ಇಲ್ಲ

26. ಬೀಜದ ಆಕಾರವೇನು? ☐ಗುಂಡಗಿನ ☐ಅಂಡಾಕಾರದ ☐ಉದ್ದನೆಯ

ಭಾಗ ಊ – ಪಕ್ಷಿಗಳು ಮತ್ತು ಅವುಗಳ ಚಟುವಟಿಕೆಗಳು

27. ನೀವು ಮರದ ಮೇಲೆ ಯಾವುದಾದರೂ ಪಕ್ಷಿಗಳನ್ನು ನೋಡಿದ್ದೀರಾ?

☐ಹೌದು ☐ಇಲ್ಲ ( ) ಎಷ್ಟು?

28. ಪಕ್ಷಿಗಳು ಏನು ಮಾಡುತ್ತಿದ್ದವು?

☐ಕುಳಿತಿರುವುದು ☐ಹಾರುವುದು ☐ಹಣ್ಣುಗಳನ್ನು ತಿನ್ನುವುದು

☐ಹಾಡುವುದು ☐ಗೂಡು ಕಟ್ಟುವುದು ☐ವಿಶ್ರಾಂತಿ ಪಡೆಯುವುದು

29. ಕೆಲವು ಪಕ್ಷಿಗಳ ಹೆಸರನ್ನು ಬರೆ? _____ _____ _____



ನನ್ನ ಮರ
ನನ್ನ ಅವಲೋಕನ



ಮರವನ್ನು ಎಚ್ಚರಿಕೆಯಿಂದ ಗಮನಿಸಿ ಮರದ ಚಿತ್ರ ಬರೆದು, ಮರದಲ್ಲಿ ನೀವು ಗಮನಿಸಿದ ಎಲ್ಲಾ ವಿವರಗಳನ್ನು ಸೇರಿಸಿ ಉದಾಹರಣೆಗೆ ಅದರ ಎಲೆಗಳು, ಹೂವುಗಳು, ಹಣ್ಣುಗಳು, ಪಕ್ಷಿಗಳು, ಕೀಟಗಳು, ಪ್ರಾಣಿಗಳು ಮತ್ತು ಅದರ ಸುತ್ತಮುತ್ತ ಇರುವ ಜೀವಿಗಳು.

ಭಾಗ ಖ – ಗೂಡು

30. ನೀವು ಮರದ ಮೇಲೆ ಯಾವುದಾದರೂ ಗೂಡುಗಳನ್ನು ನೋಡಿದ್ದೀರಾ? ☐ಹೌದು ☐ಇಲ್ಲ

31. ಪಕ್ಷಿಗಳು ಗೂಡು ಕಟ್ಟಲು ಯಾವ ಯಾವ ವಸ್ತುಗಳನ್ನು ಬಳಸುತ್ತವೆ? _____

☐ಕೊಂಬೆಗಳು ☐ಒಣಹುಲ್ಲು ☐ಎಲೆಗಳು ☐ಗರಿಗಳು ☐ಇತರೆ

ಭಾಗ ಎ – ಕೀಟಗಳು ಮತ್ತು ಇತರ ಸಣ್ಣ ಪ್ರಾಣಿಗಳು

32. ನೀವು ನೋಡಿದವುಗಳಿಗೆ ಗುರುತು ಹಾಕಿ

☐ಇರುವೆ ☐ಬಣ್ಣದಚಿಟ್ಟೆ ☐ಜೇನುನೊಣ ☐ಜೇಡರ ಹುಳು ☐ಬಸವನ ಹುಳು

☐ಜೀರುಂಡೆ ☐ಎರೆಹುಳು ☐ಕಂಬಳಿ ಹುಳು

33. ಬೇರೆ ಯಾವುದಾದರೂ ನೀವು ನೋಡಿದ್ದೀರಾ? _____

ಭಾಗ ಏ – ಪ್ರಾಣಿಗಳು ಮತ್ತು ಮರಗಳಿಗೂ ಇರುವ ಸಂಬಂಧ

34. ನೀವು ಮರದ ಮೇಲೆ ಯಾವುದಾದರೂ ಅಳಿಲುಗಳನ್ನು ಇರುವುದನ್ನು ನೋಡಿದ್ದೀರಾ? ☐ಹೌದು ☐ಇಲ್ಲ

35. ಅಳಿಲುಗಳು ಏನು ಮಾಡುತ್ತಿದ್ದವು?

☐ಹತ್ತುವುದು ☐ತಿನ್ನುವುದು ☐ಓಡುವುದು ☐ವಿಶ್ರಾಂತಿ ಪಡೆಯುವುದು

36. ನೀವು ಮರದ ಮೇಲೆ ಹಲ್ಲಿಯನ್ನು ನೋಡಿದ್ದೀರಾ? ☐ಹೌದು ☐ಇಲ್ಲ

37. ಆಶ್ರಯಕ್ಕಾಗಿ ಮರವನ್ನು ರಕ್ಷಿಸುತ್ತಿರುವ ಬೇರೆ ಯಾವುದಾದರೂ ಪ್ರಾಣಿಗಳನ್ನು ನೀವು ನೋಡಿದ್ದೀರಾ?

☐ಹೌದು ☐ಇಲ್ಲ

38. ಕೆಲವು ಪ್ರಾಣಿಗಳು ಮಾಡಿದ ಬಿಲಗಳು ಗೂಡುಗಳು ಅಥವಾ ವಾಸ ಸ್ಥಳವನ್ನು ನೀವು ಗಮನಿಸಿದ್ದೀರಾ?

☐ಹೌದು ☐ಇಲ್ಲ

39. ಯಾವ ಪ್ರಾಣಿಗಳು ಮರದ ಮೇಲೆ ಹೆಚ್ಚು ಅವಲಂಬಿತವಾಗಿವೆ ಎಂದು ಊಹಿಸುತ್ತೀಯಾ?

_____

ಭಾಗ ಐ – ಯುವ ವಿಜ್ಞಾನಿಯಂತೆ ಯೋಚಿಸುವುದು

40. ಮರದ ಯಾವ ಭಾಗವು ಹೆಚ್ಚು ಪ್ರಾಣಿಗಳನ್ನು ಆಕರ್ಷಿಸುತ್ತದೆ?

☐ಎಲೆಗಳು ☐ಹೂಗಳು ☐ಹಣ್ಣುಗಳು ☐ಕೊಂಬೆಗಳು ☐ಕಾಂಡ

41. ಅನೇಕ ಜೀವಿಗಳು ಮರಕ್ಕೆ ಏಕೆ ಭೇಟಿ ನೀಡುತ್ತವೆ?

42. ಮರವು ಜನರಿಗೆ ಹೇಗೆ ಸಹಾಯ ಮಾಡುತ್ತದೆ?

43. ಮರಗಳನ್ನು ಕಡಿದು ನಾಶ ಮಾಡಿದರೆ ಏನಾಗಬಹುದು?

44. ನೀವು ಮರದ ಬಗ್ಗೆ ಗಮನಿಸಿದ ಅತ್ಯಂತ ಆಸಕ್ತಿದಾಯಕ ವಿಷಯ ಯಾವುದು?

45. ಈ ಮರದ ಬಗ್ಗೆ ನೀವು ಇನ್ನೇನಾದರೂ ತಿಳಿದುಕೊಳ್ಳಲು ಬಯಸುತ್ತೀರಾ?

ಮಾಡು ಮತ್ತು ಕಲಿ

CV9II

1. ಚಿತ್ರಕ್ಕೆ ಬಣ್ಣ ಹಾಕಿ.



2. ಚಿತ್ರ ಮತ್ತು ಘೋಷಣೆಯೊಂದಿಗೆ ಮರಗಳ ಮಹತ್ವದ ಬಗ್ಗೆ ಭಿತ್ತಿ ಪತ್ರ ರಚಿಸಿ.



ಕಲಿಕಾ ಪರಿಶೀಲನೆ

1. ಸಸ್ಯದ ಭಾಗಗಳ ಹೆಸರುಗಳನ್ನು ಬರೆಯಿರಿ.

ಹಣ್ಣು ಬೇರು ಕಾಂಡ ಎಲೆ

ಕಾರ್ಯ (ಅವಸ್ಥೆ)	ಸಸ್ಯವನ್ನು ಗಟ್ಟಿಯಾಗಿ ಮಣ್ಣಿನಲ್ಲಿ ಹಿಡಿದಿಟ್ಟುಕೊಳ್ಳುತ್ತದೆ	ಆಹಾರವನ್ನು ತಯಾರಿಸುತ್ತದೆ	ಬೀಜಗಳನ್ನು ರಕ್ಷಿಸುತ್ತದೆ	ನೀರನ್ನು ಸಂಗ್ರಹಿಸುವುದು
ಸಸ್ಯದ ಭಾಗ				

2. ರವಿ ಮತ್ತೊಂದು ದಾಸವಾಳ ಗಿಡವನ್ನು ಬೆಳೆಯಲು ಬಯಸುತ್ತಾನೆ ಅವನಿಗೆ...

ಕಾಂಡ  ಹೂವು  ಎಲೆ 

ಹೊಸ ದಾಸವಾಳ ಗಿಡ ಬೆಳೆಯಲು ಯಾವುದನ್ನು ನೆಡಬೇಕು_____.

3. ಇದರಲ್ಲಿ ಯಾವ ಎರಡು ತರಕಾರಿಗಳು ಒಂದೇ ಗುಂಪಿಗೆ ಸೇರಿದೆ (✓) ಗುರುತು ಹಾಕಿ.

☐ ಕ್ಯಾರೆಟ್ ಮತ್ತು ಬೀಟ್ರೋಟ್ ☐ ಕ್ಯಾರೆಟ್ ಮತ್ತು ಆಲೂಗೆಡ್ಡೆ

☐ ಆಲೂಗೆಡ್ಡೆ ಮತ್ತು ಶುಂಠಿ ☐ ಈರುಳ್ಳಿ ಮತ್ತು ಕ್ಯಾರೆಟ್

4. ಕಳ್ಳಿ ಗಿಡ ಬೆಳೆಯಲು ಯಾವ ಸ್ಥಳ ಉತ್ತಮ? (✓) ಗುರುತು ಹಾಕಿ.

☐ ಮರುಭೂಮಿ ☐ ಕೆರೆ ☐ ಶೀತ ಭೂಮಿ ☐ ಸರೋವರ

5. ಮೌಖಿಕ ಪ್ರಶ್ನೆ: ಒಬ್ಬ ವಿದ್ಯಾರ್ಥಿನಿಯು ಹೇಳುತ್ತಾಳೆ ಎಲ್ಲಾ ಗಿಡದ ಬೇರಿನ ಭಾಗ ನೆಲದಡಿಯಲ್ಲಿ ಇರುತ್ತದೆ. ನೀವು ಒಪ್ಪುತ್ತೀರಾ? ಉದಾಹರಣೆಯೊಂದಿಗೆ ವಿವರಿಸಿ.



ನಾನು ಕಲಿತದ್ದು

- ಸಸ್ಯಗಳು ಬೆಳೆಯಲು ಏನೇನು ಬೇಕು ಎಂಬುದು ನನಗೆ ತಿಳಿದಿದೆ ಹಾಗೂ ಅರ್ಥ ಮಾಡಿಕೊಂಡೆ.
- ಸಸ್ಯದ ಭಾಗಗಳ ಕಾರ್ಯಗಳನ್ನು ನಾನು ವಿವರಿಸಬಲ್ಲೆ.
- ನಾನು ಬೇರು ಮತ್ತು ಕಾಂಡದ ಮಾರ್ಪಾಡುಗಳನ್ನು ಮತ್ತು ಅವುಗಳ ಕಾರ್ಯಗಳನ್ನು ಗುರುತಿಸಬಲ್ಲೆ.
- ಸಸ್ಯಗಳು ವಿವಿಧ ವಾಸಸ್ಥಳಗಳಲ್ಲಿ ಹೇಗೆ ಬದುಕು ಉಳಿಯುತ್ತವೆ ಎಂಬುದನ್ನು ನಾನು ವಿವರಿಸಬಲ್ಲೆ.
- ಮರಗಳು ಜೀವಿಗಳಿಗೆ ಆಶ್ರಯ ನೀಡುತ್ತದೆ ಮತ್ತು ಭೂಮಿ ಮೇಲಿನ ಜೀವಿಗಳನ್ನು ಬೆಳೆಸುತ್ತದೆ ಎಂದು ನನಗೆ ತಿಳಿದಿದೆ.
- ನಾನು ಮರದ ಬಗ್ಗೆ ಮಾಹಿತಿಯನ್ನು ಗಮನಿಸಬಹುದು, ದಾಖಲಿಸಬಹುದು, ಹಂಚಿಕೊಳ್ಳಬಹುದು.

ನನ್ನಿಂದ ಸಾಧ್ಯ

VE7EA

1. ಒಬ್ಬ ರೈತ ಹೊಲದಿಂದ ಒಂದು ಚಿಕ್ಕ ಗಿಡವನ್ನು ಹೊರ ತೆಗೆದನ್ನು ಅದಕ್ಕೆ ಒಂದು ದಪ್ಪವಾದ ಮುಖ್ಯ ಬೇರು ಮತ್ತು ಸಣ್ಣ ಕೊಂಬೆಗಳಿದ್ದವು. ಅದು ಯಾವ ಗಿಡವಾಗಿರಬಹುದು? (✓) ಗುರುತು ಹಾಕಿ.



2. ಯಾವುದು ವೈವಿಧ್ಯತೆಯಿಂದ ಕೂಡಿದೆ? _____ ಏಕೆ? _____



ಕ್ಯಾರೆಟ್



ಆಲೂಗಡ್ಡೆ



ಈರುಳ್ಳಿ



ಶುಂಠಿ

3. ಸಸ್ಯದಲ್ಲಿ ನೀರು ಹೇಗೆ ಸಾಗಿಸಲ್ಪಡುತ್ತದೆ ಎಂಬುದರ ಹಂತಗಳನ್ನು 1 ರಿಂದ 3 ರವರೆಗೆ ಸಂಖ್ಯೆಗಳನ್ನು ಗುರುತಿಸುವ ಮೂಲಕ ಅನುಕ್ರಮಗೊಳಿಸಿ.

ಅ) ನೀರು ಎಲೆಗಳು ಮತ್ತು ಹೂವುಗಳನ್ನು ತಲುಪುತ್ತದೆ - ☐

ಆ) ಬೇರುಗಳು ನೀರನ್ನು ಹೀರಿಕೊಳ್ಳುತ್ತವೆ - ☐

ಇ) ಕಾಂಡವು ನೀರನ್ನು ಒಯ್ಯುತ್ತವೆ - ☐

4. ಒಂದು ಸಸ್ಯದ ಎಲೆಗಳು ಒಣಗಿದವು. ಸರಿಯಾದ ಕಾರಣಕ್ಕೆ (✓) ಗುರುತು ಹಾಕಿ.

☐ ತುಂಬಾ ಸೂರ್ಯನ ಬೆಳಕು

☐ ಅಧಿಕ ಹೂವುಗಳು

☐ ಸೂರ್ಯನ ಬೆಳಕು ಇಲ್ಲ

☐ ನೀರಿಲ್ಲ

5. ಈ ಸಸ್ಯಕ್ಕೆ ಬೇರುಗಳನ್ನು ಬರೆಯಿರಿ.



6. ಮೌಖಿಕ ಪ್ರಶ್ನೆಗಳು

ಅ. ಒಂದು ಸಸ್ಯಕ್ಕೆ ಎಲೆಗಳಿಲ್ಲದಿದ್ದರೆ ಏನಾಗಬಹುದು?

ಆ. ಮರಗಳು ಹಣ್ಣುಗಳನ್ನು ನೀಡದಿದ್ದರೂ ನಾವು ಅವುಗಳನ್ನು ಏಕೆ ರಕ್ಷಿಸಬೇಕು?

7. ಯೋಜನೆ – ನನ್ನ ಸುತ್ತಮುತ್ತಲಿನ ಸಸ್ಯಗಳು

ನಿಮ್ಮ ಮನೆ/ ಶಾಲೆ/ಬೀದಿಯ ಸುತ್ತಮುತ್ತ ಯಾವುದಾದರೂ ಐದು ಮರಗಳನ್ನು ಗಮನಿಸಿ. ಅವುಗಳನ್ನು ಹೆಸರಿಸಿ ಮತ್ತು ಅವುಗಳ ಎಲೆಗಳನ್ನು ಚಿತ್ರಿಸಿ.

2 ನಾವು ತಿನ್ನುವ ಆಹಾರ

ಆಹಾರವು ನಮ್ಮ ತಟ್ಟೆಗೆ ಹೇಗೆ ತಲುಪುತ್ತದೆ?

ಅಕ್ಕಿಯ ಪಯಣ

ಅರುಣ್ ತರಕಾರಿ ಬಿರಿಯಾನಿಯಲ್ಲಿ ತರಕಾರಿಗಳನ್ನು ಎಸೆಯಲು ಹೊರಟಿದ್ದಾನೆ. ಅಜ್ಜಿ ಅವನನ್ನು ನಿಧಾನವಾಗಿ ತಡೆಯುತ್ತಾಳೆ.



ನಾವು ಹಾಡೋಣ

ನಮ್ಮ ಹೊಲ ಹಸಿರು ಹೊಲ
ಹಸಿರು ಹಸಿರು ಸುಂದರ ಹೊಲ
ರೈತನು ಉಳುಮೆ ಮಾಡುವ
ಬಿತ್ತನೆ ಮಾಡಿ ಬೆಳೆ ಬೆಳೆಸುವ
ಮಳೆ ಬಂತು ಟಪ್ ಟಪ್
ಬೀಜ ಮೊಳಕೆ ಚುಪ್ ಚುಪ್
ರಾಗಿ ಜೋಳ ಬೆಳೆಯುತಾ
ಹೊಲವೆಲ್ಲವೂ ಹಸಿರು ಕಾಣುತಾ
ರೈತನ ಶ್ರಮಕ್ಕೆ ಕೈಜೋಡಿಸೋಣ
ಆಹಾರವನ್ನು ಗೌರವಿಸೋಣ.



ಪೊಂಗಲ್ ಮತ್ತು ಆಡಿ ಪೆರುಕ್ಕು ಹಬ್ಬಗಳು ಸೂರ್ಯ, ದನ ಕರುಗಳು, ನದಿಗಳು ಮತ್ತು ಪ್ರಕೃತಿಯ ಫಸಲಿಗೆ ಧನ್ಯವಾದ ಹೇಳಲು ಆಚರಿಸಲಾಗುವ ಎರಡು ಹಬ್ಬಗಳಾಗಿವೆ.

ಗಮನಿಸಿ ಮತ್ತು ಚರ್ಚಿಸಿ



ನಾನು ಎಂದಿಗೂ ಆಹಾರವನ್ನು ವ್ಯರ್ಥ ಮಾಡುವುದಿಲ್ಲ ಪ್ರತಿಯೊಂದು ಕಾಳು ಅಮೂಲ್ಯ

ಶಿಕ್ಷಕರ ಟಿಪ್ಪಣಿ

ಮಕ್ಕಳಿಗೆ ಚಿತ್ರಗಳನ್ನು ಎಚ್ಚರಿಕೆಯಿಂದ ಗಮನಿಸಿ ಮತ್ತು ಅಕ್ಕಿಯ ಪಯಣದ ಬಗ್ಗೆ ಚರ್ಚಿಸಿ ಹೇಳಿ.

ಮಾಡು ಮತ್ತು ಕಲಿ

1. ಒಂದರಿಂದ ಎಂಟರವರೆಗೆ (1–8) ಅಕ್ಕಿಯ ಪಯಣವನ್ನು ಅನುಕ್ರಮವಾಗಿ ಬರೆಯಿರಿ.










2. ಒಂದು ಬಟ್ಟಲು ಅನ್ನದಲ್ಲಿ ಎಷ್ಟೋ ಜನರ ಪರಿಶ್ರಮ ಅಡಗಿವೆ.


ಸೂರ್ಯ


ನೀರಿನಪಂಪ್


ಬಣ್ಣದ ಚಿಟ್ಟೆ


ಮಳೆ


ಎತ್ತು

ವರ್ಗ (ಗುಂಪು)	ಹೆಸರು
ನೈಸರ್ಗಿಕ ಸಹಾಯಕರು	
ಪ್ರಾಣಿಗಳು	
ಜನರು	
ಯಂತ್ರಗಳು, ವಾಹನಗಳು	


ಟ್ರ್ಯಾಕ್ಟರ್


ಲಾರಿ


ರೈತ


ಅಡುಗೆ ಮಾಡುವ ವ್ಯಕ್ತಿ


ಎರೆಹುಳು


ಮಣ್ಣು


ಅಂಗಡಿಯವ

ಶಿಕ್ಷಕರ ಟಿಪ್ಪಣಿ

ಪ್ರಕೃತಿ ಜನರು ಮತ್ತು ಯಂತ್ರಗಳು ಹೊಲದಿಂದ ಆಹಾರವನ್ನು ನಮ್ಮ ತಟ್ಟೆಗೆ ತರಲು ವಿಭಿನ್ನ ರೀತಿಯಲ್ಲಿ ಕೊಡುಗೆ ನೀಡುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಮಾರ್ಗದರ್ಶನ ನೀಡಿ.

3. ಯೋಚಿಸಿ ಮತ್ತು ಬರೆಯಿರಿ

ಎ. ಅಕ್ಕಿಯ ಪಯಣದ ಯಾವ ಅಂತವು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ?_____

ಬಿ. ಯಾವ ಹಂತ ಅತ್ಯಂತ ಮುಖ್ಯ? ಏಕೆ? _____

ಸಿ. ಭತ್ತದ ಬೆಳವಣಿಗೆಯ ಹಂತದಲ್ಲಿ ಮಳೆ ಬರದಿದ್ದರೆ ಏನಾಗಬಹುದು? _____

4. ಅಕ್ಕಿಯ ಕಥೆಯನ್ನು ನಿಮ್ಮ ಕುಟುಂಬದೊಂದಿಗೆ ಹಂಚಿಕೊಳ್ಳಿ



ಚಟುವಟಿಕೆಯ ಸಮಯ



ಪ್ರತಿ ಮಗುವಿಗೆ ಒಂದು ಅಕ್ಕಿ ಆಕಾರದ ಕಾಗದವನ್ನು ನೀಡಿ



ಅಕ್ಕಿಯ ಬೆಳವಣಿಗೆಯ ಪಯಣದಲ್ಲಿ ನೀವು ಧನ್ಯವಾದ ಹೇಳಲು ಬಯಸುವ ವ್ಯಕ್ತಿ / ಸಹಾಯಕನ ಹೆಸರನ್ನು ಬರೆಯಿರಿ_____.



ಕಾಗದದ ಧಾನ್ಯಗಳನ್ನು ಸೇರಿಸಿ ಕೃತಜ್ಞತೆಯ ಸುಂದರವಾದ ಸರಪಳಿಯನ್ನು ಮಾಡಿ

ಆಹಾರ ಪದಾರ್ಥಗಳು

HU3UG



ಗಮನಿಸಿ ಮತ್ತು ಚರ್ಚಿಸಿ



ಒಂದು ಊಟವನ್ನು ಹಲವು ಪದಾರ್ಥಗಳನ್ನು ಬಳಸಿ ತಯಾರಿಸಲಾಗುತ್ತದೆ. ವಿವಿಧ ಪದಾರ್ಥಗಳು ಆಹಾರಕ್ಕೆ ರುಚಿ, ಬಣ್ಣ ಮತ್ತು ವಾಸನೆಯನ್ನು ನೀಡುತ್ತವೆ.

ಶಿಕ್ಷಕರ ಟಿಪ್ಪಣಿ

ಖಾದ್ಯಕ್ಕೆ ಸೇರಿಸಲಾದ ವಿವಿಧ ಪದಾರ್ಥಗಳು ಮತ್ತು ಅವುಗಳ ಕೊಡುಗೆಯನ್ನು ಚರ್ಚಿಸಿ.

ಕರಿಮೆಣಸನ್ನು "**ಮಸಾಲೆಗಳ ರಾಜ**" ಎಂದು ಕರೆಯಲಾಗುತ್ತದೆ
ಏಲಕ್ಕಿಯನ್ನು "**ಮಸಾಲೆಗಳ ರಾಣಿ**" ಎಂದು ಕರೆಯಲಾಗುತ್ತದೆ.

ಮಾಡು ಮತ್ತು ಕಲಿ

1. ಚಿತ್ರವನ್ನು ಗಮನಿಸಿ ಉತ್ತರಿಸಿ.

ಅ. ಯಾವ ಪದಾರ್ಥವನ್ನು ಹೆಚ್ಚಾಗಿ ಬಳಸಲಾಗುತ್ತದೆ _____

ಆ. ಯಾವ ಪದಾರ್ಥವನ್ನು ಸಣ್ಣ ಪ್ರಮಾಣದಲ್ಲಿ ಸೇರಿಸಲಾಗುತ್ತದೆ _____

ಇ. ತರಕಾರಿ ಬಿರಿಯಾನಿಗೆ ಅಹ್ಲಾದಕರ ವಾಸನೆಯನ್ನು ನೀಡುವ ಪದಾರ್ಥಗಳು ಯಾವುವು?

_____

2. ಪೊಂಗಲ್ ಮಾಡೋಣ!

ಪಾಕ ವಿಧಾನವನ್ನು ಓದಿ ಮತ್ತು ಖಾಲಿ ಜಾಗಗಳನ್ನು ಭರ್ತಿ ಮಾಡಿ.

ಹೆಸರುಬೇಳೆ	ಉಪ್ಪು	ತುಪ್ಪ	ಜೀರಿಗೆ
ಅಕ್ಕಿ	ಕರಿಮೆಣಸು	ನೀರು	ಗೋಡಂಬಿ ಬೀಜಗಳು
	ಕರಿಬೇವಿನಎಲೆಗಳು		

 _____ ಮತ್ತು  _____ ಇವುಗಳನ್ನು ತೊಳೆದುಕೊಳ್ಳಿ. ಅವುಗಳಿಗೆ 

_____ ಸೇರಿಸಿ ಮೃದುವಾಗುವವರೆಗೆ ಬೇಯಿಸಿಕೊಳ್ಳಿ. ನಂತರ  _____ ಸೇರಿಸಿ. ಒಂದು

ಬಾಣಲೆಯಲ್ಲಿ _____  ಬಿಸಿ ಮಾಡಿಕೊಳ್ಳಿ. ಅದರಲ್ಲಿ  _____ ಬೀಜಗಳು, ಸಣ್ಣಗೆ

ಹೆಚ್ಚಿದ  _____, ಶುಂಠಿ ಮತ್ತು  _____,  _____

ಇವುಗಳನ್ನು ಸೇರಿಸಿ ಹುರಿದುಕೊಳ್ಳಿ. ಇದನ್ನು ಬೇಯಿಸಿದ ಮಿಶ್ರಣಕ್ಕೆ ಸೇರಿಸಿ ಚೆನ್ನಾಗಿ ಕಲಸಿ ಬಡಿಸಿ.

3. ಬಿರಿಯಾನಿ ಮತ್ತು ಪೊಂಗಲ್‌ನಲ್ಲಿ ಬಳಸುವ ಪದಾರ್ಥಗಳನ್ನು ಹೋಲಿಸಿ ಚರ್ಚಿಸಿ ಬರೆಯಿರಿ.

ಅ. ಒಂದಕ್ಕಿಂತ ಹೆಚ್ಚು ಆಹಾರಗಳಲ್ಲಿ ಯಾವ ಪದಾರ್ಥಗಳನ್ನು ಬಳಸಲಾಗುತ್ತದೆ?

ಆ. ಒಂದೇ ಆಹಾರಗಳಲ್ಲಿ ಯಾವ ಪದಾರ್ಥಗಳನ್ನು ಬಳಸಲಾಗುತ್ತದೆ?

ಇ. ಯಾವ ಆಹಾರ ಅತ್ಯಂತ ವೈವಿಧ್ಯಮಯ ಪದಾರ್ಥಗಳನ್ನು ಹೊಂದಿದೆ?



ಮಕ್ಕಳು ಚಟುವಟಿಕೆಗಳನ್ನು ಪೂರ್ಣಗೊಳಿಸಲು ಬೆಂಬಲಿಸಿ.

ಆಹಾರವಾಗಿ ಬಳಸುವ ಸಸ್ಯದ ಭಾಗಗಳು

ನಮ್ಮ ಆಹಾರವು ಸಸ್ಯದ ಯಾವ ಭಾಗಗಳಿಂದ ಸಿಗುತ್ತದೆ?

ಅರುಣ ಅನುಮಾನ....



ಅಜ್ಜಿ ಅರುಣ್ ನನ್ನು ಒಂದು ವಿಶೇಷ ಅಂಗಡಿಗೆ ಕರೆದುಕೊಂಡು ಹೋಗುತ್ತಾರೆ ಅಲ್ಲಿ ಪ್ರತಿಯೊಂದು ಕಪಾಟಿನಲ್ಲಿ ಸಸ್ಯದ ಒಂದು ಭಾಗದ ಪದಾರ್ಥಗಳು ಇರುತ್ತವೆ.

ಗಮನಿಸಿ ಮತ್ತು ಚರ್ಚಿಸಿ



ವಿವಿಧ ಸಸ್ಯಗಳು ನಮಗೆ ವಿವಿಧ ಆಹಾರವನ್ನು ನೀಡುತ್ತವೆ ಹಾಗೆಯೇ ನಾವು ಒಂದೇ ಸಸ್ಯದ ವಿವಿಧ ಭಾಗಗಳನ್ನು ತಿನ್ನುತ್ತೇವೆ.

ಮಾಡು ಮತ್ತು ಕಲಿ

ತರಕಾರಿ ಬಿರಿಯಾನಿ ಪದಾರ್ಥಗಳನ್ನು ನೀವು ಯಾವ ಕಪಾಟಿನಿಂದ ಸಂಗ್ರಹಿಸುತ್ತೀರಿ?

1. ಚಿತ್ರಕ್ಕೆ ಸೂಕ್ತವಾದ ಸಸ್ಯದ ಭಾಗಗಳನ್ನು ಬರೆಯಿರಿ.

ಬೀಜ ಎಲೆ ಬೇರು ಕಾಂಡ ಹೂ ಹಣ್ಣು



ಅಕ್ಕಿ _____



ಶುಂಠಿ _____



ಕೊತ್ತಂಬರಿ ಸೊಪ್ಪು _____



ಟೊಮೆಟೊ _____



ಹೂಕೋಸು _____



ಕ್ಯಾರೆಟ್ _____

2. ನಿಮ್ಮ ಕುಟುಂಬದವರೊಂದಿಗೆ ಮಾತನಾಡಿ ಊಟದಲ್ಲಿ ಬಳಸುವ ಪದಾರ್ಥಗಳನ್ನು ಪಟ್ಟಿ ಮಾಡಿ ಪ್ರತಿಯೊಂದು ಘಟಕಾಂಶದ ಸಸ್ಯದ ಭಾಗವನ್ನು ಬರೆಯಿರಿ ಮತ್ತು ಅದನ್ನು ತರಗತಿಯಲ್ಲಿ ಹಂಚಿಕೊಳ್ಳಿ.

ಸಸ್ಯದ ಭಾಗಗಳು

ಹೆಸರು / ಭಾಗ	ಬೇರು	ಕಾಂಡ	ಎಲೆ	ಹೂ	ಹಣ್ಣು	ಬೀಜ	ಮಸಾಲೆ/ಇತರೆ
ಅರುಣ್							
ಕಲಾ							
ನೀಲ							



3. ಪದಾರ್ಥಗಳ ಬಗ್ಗೆ ನೀವು ಏನು ಗಮನಿಸಿದ್ದೀರಿ? ಸರಿ (✓) ಗುರುತು ಹಾಕಿ.

- ಕೆಲವು ಪದಾರ್ಥಗಳನ್ನು ಅನೇಕ ಊಟಗಳಲ್ಲಿ ಬಳಸಲಾಗುತ್ತದೆ. ☐
- ವಿಭಿನ್ನ ಆಹಾರಗಳಲ್ಲಿ ವಿಭಿನ್ನ ಪದಾರ್ಥಗಳನ್ನು ಬಳಸುತ್ತೇವೆ. ☐
- ಒಂದೇ ಆಹಾರ ಪದಾರ್ಥವನ್ನು ಹಲವು ವಿಧಗಳಲ್ಲಿ ಬಳಸಬಹುದು. ☐

4. ಯೋಜನೆ: ಕುಟುಂಬದ ಸದಸ್ಯರೊಬ್ಬರಿಂದ ಖರೀದಿಸುವ ಪಟ್ಟಿಯನ್ನು ಕೇಳಿ, ಅಂಗಡಿಗೆ ಭೇಟಿ ನೀಡಿ ನೀವು ಖರೀದಿಸುವ ಪ್ರತಿಯೊಂದು ಪದಾರ್ಥಗಳ ಸಸ್ಯ ಭಾಗವನ್ನು ಗುರುತಿಸಿ.

ಬೀಜಗಳು

ಬೀಜಗಳು ನಮಗೆ ಏಕೆ ಮುಖ್ಯ?

ಅಜ್ಜಿ ನನ್ನ ತರಕಾರಿ ಬಿರಿಯಾನಿಯಲ್ಲಿ ನನಗೆ ತುಂಬಾ ಸಸ್ಯದ ಭಾಗಗಳು ಇದ್ದವು. ಸಸ್ಯದ ಯಾವ ಭಾಗಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ? ಹೇಳಿ ಅಜ್ಜಿ.



ನಾವು ಒಂದು ಹಾಡನ್ನು ಹಾಡಿ ತಿಳಿದುಕೊಳ್ಳೋಣ

ಚಟುವಟಿಕೆಯ ಸಮಯ

ಬನ್ನಿ ನನ್ನ ಜೊತೆ ಹಾಡಿ!

ತಟ್ಟು ಚಪ್ಪಾಳೆ ತಟ್ಟು ಮುಟ್ಟು ಪಾದವ ಮುಟ್ಟು
ನಿಮಗೆ ಇಷ್ಟವಾದ ಧಾನ್ಯಗಳು ಯಾವುವು?
ಅಕ್ಕಿ ಗೋಧಿ ರಾಗಿ ಕಂಬು!
ಸೇವಿಸೋಣ: ಆರೋಗ್ಯವಾಗಿರೋಣ!


ಗೋಧಿ


ಅಕ್ಕಿ


ರಾಗಿ (Finger millet)

ತಟ್ಟು ಚಪ್ಪಾಳೆ ತಟ್ಟು ಮುಟ್ಟು ಪಾದವ ಮುಟ್ಟು
ನೀನು ಇಷ್ಟಪಟ್ಟು ತಿನ್ನುವ ಬೆಳೆಗಳು ಯಾವುವು?
ಹೆಸರುಬೇಳೆ ಉದ್ದಿನಬೇಳೆ ಕಡಲೆಬೇಳೆ
ನಿಮಗೂ ನನಗೂ ಆರೋಗ್ಯ ನೀಡುವ ಬೇಳೆ


ಹೆಸರು ಕಾಳು


ಹಸಿ ಕಡಲೆ


ಕಂಬು (Pearl millet)


ಉದ್ದಿನಬೇಳೆ

ತಟ್ಟು ಚಪ್ಪಾಳೆ ತಟ್ಟು ಮುಟ್ಟು ಪಾದವ ಮುಟ್ಟು
ಅಡುಗೆಗೆ ಬಳಸುವ ಎಣ್ಣೆ ಯಾವುದರಿಂದ ಸಿಗುತ್ತದೆ?
ನೆಲಗಡಲೆ ಎಳ್ಳು ಕೊಬ್ಬರಿ
ನಿಮಗೂ ಬೇಕು ಅಡುಗೆ ಎಣ್ಣೆ


ನೆಲಗಡಲೆ


ತೊಗರಿಬೇಳೆ


ತೆಂಗಿನಕಾಯಿ


ಎಳ್ಳು

ತಟ್ಟು ಚಪ್ಪಾಳೆ ತಟ್ಟು ಮುಟ್ಟುಪಾದವ ಮುಟ್ಟು
ಆಹಾರವನ್ನು ರುಚಿಕರವಾಗಿರಿಸುವುದು ಯಾವುದು?
ಸಾಸಿವೆ ಜೀರಿಗೆ ಮೆಣಸು ಸೋಂಪುಗಳು
ನನಗೂ ನಿನಗೂ ಬೇಕು ರುಚಿಕರವಾದ ಮಸಾಲೆಗಳು


ಮೆಣಸು


ಸೋಂಪು

ತಟ್ಟು ಚಪ್ಪಾಳೆ ತಟ್ಟು ಮುಟ್ಟುಪಾದವ ಮುಟ್ಟು
ಇವೆಲ್ಲವೂ ಬೀಜಗಳು! ಇವೆಲ್ಲವೂ ಬೀಜಗಳು


ಜೀರಿಗೆ


ಸಾಸಿವೆ

ನಾವು ತಿನ್ನುವ ಅನೇಕ ಆಹಾರಗಳಲ್ಲಿರುವ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳು ಮತ್ತು ಅನೇಕ ಮಸಾಲೆಗಳು ವಸ್ತುಗಳು ಬೀಜಗಳಾಗಿವೆ. ಅವು ಇಂದು ನಮಗೆ ಆಹಾರವನ್ನು ನೀಡುತ್ತವೆ ಮತ್ತು ನಾಳೆ ಹೊಸ ಸಸ್ಯಗಳಾಗಿ ಬೆಳೆಯುತ್ತವೆ.

ಶಿಕ್ಷಕರ ಟಿಪ್ಪಣಿ ತರಗತಿಗೆ ಸಾಧ್ಯವಾದಷ್ಟು ಬೀಜಗಳನ್ನು ತಂದು ಮಕ್ಕಳಿಗೆ ತೋರಿಸಿ.

ಮಾಡು ಮತ್ತು ಕಲಿ

1. ಹಾಡನ್ನು ಬಳಸಿ ವಿವಿಧ ಬೀಜಗಳನ್ನು ಗುರುತಿಸಿ ಮತ್ತು ಕೋಷ್ಟಕವನ್ನು ಪೂರ್ಣಗೊಳಿಸಿ.

ಅಕ್ಕಿ, ಹೆಸರುಕಾಳು, ರಾಗಿ, ಕಡಲೆ, ಗೋಧಿ, ತೊಗರಿ ಬೇಳೆ, ಮೆಕ್ಕೆಜೋಳ, ಉದ್ದು, ಏಲಕ್ಕಿ, ಸಾಸಿವೆ, ಎಳ್ಳು, ತೆಂಗಿನಕಾಯಿ, ಜೀರಿಗೆ, ನೆಲಕಡಲೆ, ಮೆಣಸು, ಸೂರ್ಯಕಾಂತಿ, ಕೊತ್ತಂಬರಿ.

XF9IA



2. ಗುಂಪಿಗೆ ಸೇರದ ಭಿನ್ನವಾದದನ್ನು ಸರಿ (✓) ಗುರುತು ಹಾಕಿ.



☐ ಅಕ್ಕಿ ☐ ಗೋಧಿ ☐ ಹಸಿಕಡಲೆ ☐ ರಾಗಿ

ಇದು ಗುಂಪಿಗೆ ಸೇರುವುದಿಲ್ಲ ಏಕೆಂದರೆ ಇದು ಒಂದು _____.

3. ಮಸಾಲೆಗಳ ಪದಬಂಧವನ್ನು ಪೂರ್ಣಗೊಳಿಸು.



4. ಸರಿಯಾದ ಆಹಾರದೊಂದಿಗೆ ಆ ಆಹಾರಕ್ಕೆ ಬಳಸುವ ಪದಾರ್ಥಗಳನ್ನು ಹೊಂದಿಸಲು ರೇಖೆಗಳನ್ನು ಎಳೆಯಿರಿ.


ಕರಿಬೇವಿನ ಸೊಪ್ಪು ○


ಹುಣಸೆ ಹಣ್ಣು ○


ತೊಗರಿ ಬೆಳೆ ○


ಉದ್ದಿನ ಬೇಳೆ ○


ತರಕಾರಿಗಳು ○


ಸಾಸಿವೆ ಬೀಜಗಳು ○


ಅಕ್ಕಿ ○





ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳ ಪದಾರ್ಥಗಳನ್ನು ವರ್ಗೀಕರಿಸಿ.

ಆಹಾರಗಳು	ಧಾನ್ಯಗಳು	ದ್ವಿದಳ ಧಾನ್ಯಗಳು
ಇಡ್ಲಿ		
ಸಾಂಬಾರ್		

5. ಈ ಆಹಾರ ಪದಾರ್ಥಗಳನ್ನು ತಯಾರಿಸಲು ಬೇಕಾದ ದ್ವಿದಳ ಧಾನ್ಯಗಳನ್ನು ಕಂಡುಹಿಡಿಯಿರಿ.

ಉದ್ದಿನ ವಡೆ  → ----------

ಹಸಿಕಡಲೆ ಗುಗ್ಗರಿ  → ----------

ಸೊಪ್ಪುಗಳು

ವಿವಿಧ ಸೊಪ್ಪುಗಳನ್ನು ನಾವು ಹೀಗೆ ಗುರುತಿಸಬಹುದು?

JR9SV

ಗಮನಿಸು ಮತ್ತು ಚರ್ಚಿಸಿ

ಅರುಣ್ ನ ತಾಯಿ ಅವನಿಗೆ ದಂಟಿನ ಸೊಪ್ಪನ್ನು ಕೊಂಡುಕೊಳ್ಳಲು ಬಯಸುತ್ತಾರೆ. ಅದರ ಜೊತೆಗೆ ಅವಳ ಅಜ್ಜಿ ನುಗ್ಗೆಸೊಪ್ಪನ್ನು ತೆಗೆದುಕೊಳ್ಳಲು ಬಯಸುತ್ತಾರೆ.


ಪುದೀನ


ಕರಿಬೇವಿನ ಸೊಪ್ಪು


ನುಗ್ಗೆಸೊಪ್ಪು


ಪಾಲಕ್ ಸೊಪ್ಪು


ದಂಟಿನ ಸೊಪ್ಪು


ಕೊತ್ತಂಬರಿ ಸೊಪ್ಪು



ಸೊಪ್ಪುಗಳು ನಾವು ಬೆಳೆಯಲು, ಆಟವಾಡಲು ಮತ್ತು ಚೈತನ್ಯದಿಂದಿರಲು ಸಹಾಯ ಮಾಡುತ್ತವೆ.

ಶಿಕ್ಷಕರ ಟಿಪ್ಪಣಿ

ತರಗತಿಗೆ ವಿವಿಧ ಸೊಪ್ಪುಗಳನ್ನು ತಂದು ಮಕ್ಕಳು ಅವುಗಳನ್ನು ಗುರುತಿಸಲು ಸಹಾಯ ಮಾಡಿದೆ.

ಮಾಡು ಮತ್ತು ಕಲಿ

1. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಅ. ಸೊಪ್ಪನ್ನು ಬಳಸಿ ಮನೆಯಲ್ಲಿ ತಯಾರಿಸಿದ ಆಹಾರವನ್ನು ಹಂಚಿಕೊಳ್ಳಿ.

ಆ. ನೀವು ಯಾವ ಸೊಪ್ಪನ್ನು ತಿನ್ನಲು ಇಷ್ಟಪಡುತ್ತೀರಿ? ಏಕೆ?

ಇ. ಚಟ್ನಿ ಮಾಡಲು ನಾವು ಯಾವ ಸೊಪ್ಪಿನ ಎಲೆಗಳನ್ನು ಬಳಸುತ್ತೇವೆ

2. ಕಾಗದ ಹಾಳೆಯ ಮೇಲೆ ಎಲೆಗಳ ಮುದ್ರೆಯನ್ನು ರಚಿಸು.









3. ನಿಮ್ಮ ಕುಟುಂಬದೊಂದಿಗೆ ತರಕಾರಿ ಅಂಗಡಿಗೆ ಹೋಗಿ ಅಲ್ಲಿ ಹಲವು ಬಗೆಯ ಸೊಪ್ಪುಗಳನ್ನು ಪಟ್ಟಿ ಮಾಡು.

4. ಹೊಂದಿಸಿ.













ಪುದೀನ

ಪಾಲಕ್ ಸೊಪ್ಪು

ಕರಿಬೇವಿನ ಸೊಪ್ಪು

ದಂಟಿನ ಸೊಪ್ಪು

ನುಗ್ಗೆಸೊಪ್ಪು

ಕೊತ್ತಂಬರಿ ಸೊಪ್ಪು

5. ಸೊಪ್ಪುಗಳನ್ನು ಗುರುತಿಸಿ ಮತ್ತು ಬಣ್ಣ ಹಚಿರಿ.



ದಂಟಿನ ಸೊಪ್ಪು



ಪಾಲಕ್ ಸೊಪ್ಪು



ನುಗ್ಗೆ ಸೊಪ್ಪು

ಆಹಾರದ ಗುಂಪುಗಳು

ಗಮನಿಸಿ ಮತ್ತು ಚರ್ಚಿಸಿ

ಅಜ್ಜಿ ನಾವು ಸಸ್ಯದ ಬೇರೆ ಬೇರೆ ಭಾಗಗಳನ್ನು ತಿನ್ನುತ್ತೇವೆ. ನಾವು ಇಷ್ಟೊಂದು ಬಗೆಯ ಆಹಾರವನ್ನು ಏಕೆ ತಿನ್ನಬೇಕು?



ನಾವು ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ತಿನ್ನುತ್ತೇವೆ. ಏಕೆಂದರೆ ಅವುಗಳು ವಿವಿಧ ಆಹಾರದ ಗುಂಪುಗಳಿಗೆ ಸೇರಿವೆ.



ಪ್ರತಿಯೊಂದು ಆಹಾರಕ್ಕೂ ವಿಶೇಷ ಕಾರ್ಯವಿದೆ ಕೆಲವು ನಮಗೆ ಶಕ್ತಿಯನ್ನು ನೀಡುತ್ತವೆ ಕೆಲವು ನಮ್ಮ ಬೆಳವಣಿಗೆಯ ಸಹಾಯ ಮಾಡುತ್ತದೆ ಮತ್ತು ಕೆಲವು ನಮ್ಮನ್ನು ರೋಗಗಳಿಂದ ರಕ್ಷಿಸುತ್ತದೆ ಆದುದರಿಂದ ಆರೋಗ್ಯವಾಗಿ ಮತ್ತು ಬಲಿಷ್ಠವಾಗಿರಲು ಪ್ರತಿದಿನ ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಸೇವಿಸಬೇಕು.

ನಮ್ಮ ದೇಹವು ಉತ್ತಮವಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ.

ತುಂಬಾ ಕಡಿಮೆ ನೀರು ಕುಡಿಯುವುದರಿಂದ ನಮಗೆ ಆಯಾಸ ಮತ್ತು ಬಾಯಾರಿಕೆಯನ್ನು ಉಂಟುಮಾಡುತ್ತದೆ.

ವಿಶೇಷವಾಗಿ ಬಿಸಿಲಿನ ದಿನಗಳಲ್ಲಿ ಪ್ರತಿದಿನ ಸಾಕಷ್ಟು ಶುದ್ಧ ಸುರಕ್ಷಿತ ನೀರನ್ನು ಕುಡಿಯಿರಿ.

ಸಣ್ಣ ಸಹಾಯ! ದೊಡ್ಡ ಬದಲಾವಣೆ!

ನಿಮ್ಮ ಮನೆಯ ಬಳಿ ಪ್ರಾಣಿಗಳಿಗೆ ಶುದ್ಧ ನೀರಿನ ಬಾಣಲಿ ಇರಿಸಿ.



ಆರೋಗ್ಯಕರ ಪಾನೀಯಗಳು

ಬೇರು ಕಾಂಡ ಎಲೆ ಹಣ್ಣು



ಕ್ಯಾರೆಟ್ ಕಬ್ಬು ಪುದೀನ ನಿಂಬೆಹಣ್ಣು ಎಳನೀರು

ನಾವು ಸಸ್ಯದ ವಿವಿಧ ಭಾಗಗಳಿಂದ ಆರೋಗ್ಯಕರ ಪಾನೀಯಗಳನ್ನು ಪಡೆಯಬಹುದು ಮತ್ತು ತಯಾರಿಸಬಹುದು.

ಎಲೆಗಳಿಗೆ ●, ಬೇರುಗಳಿಗೆ ●, ಹಣ್ಣುಗಳಿಗೆ ●, ಕಾಂಡಗಳಿಗೆ ● ಬಣ್ಣಗಳನ್ನು ಹಚ್ಚಿರಿ. ಇವುಗಳು ಆರೋಗ್ಯಕರ ಪಾನೀಯಗಳನ್ನು ತಯಾರಿಸಲು ಬಳಸುವ ಸಸ್ಯದ ಭಾಗಗಳಾಗಿವೆ.



ಎಳನೀರು ಕಬ್ಬಿನರಸ ನಿಂಬೆರಸ ಪುದೀನ ರಸ ಕ್ಯಾರೆಟ್ ರಸ

ಚಟುವಟಿಕೆಯ ಸಮಯ



ಶಿಕ್ಷಕರ ಟಿಪ್ಪಣಿ

ಆಹಾರ ಪದಾರ್ಥಗಳ ಹೆಸರುಗಳನ್ನು ಕಾಗದ ತುಂಡುಗಳ ಮೇಲೆ ಬರೆದು ಚಟುವಟಿಕೆಯನ್ನು ಮಾಡಿ.

ಮಾಡು ಮತ್ತು ಕಲಿ

1. ಕೊಟ್ಟಿರುವ ವೃತ್ತಗಳಲ್ಲಿ ದೇಹವನ್ನು ಸದೃಢಗೊಳಿಸುವ ಆಹಾರ ಪದಾರ್ಥಗಳಿಗೆ 🔵, ಶಕ್ತಿ ನೀಡುವ ಆಹಾರ ಪದಾರ್ಥಗಳಿಗೆ 🟢 ಮತ್ತು ರಕ್ಷಣಾತ್ಮಕ ಆಹಾರ ಪದಾರ್ಥಗಳಿಗೆ 🔴 ಬಣ್ಣ ಹಚ್ಚಿರಿ.



2. ಕೆಳಗಿನವುಗಳಿಗೆ ಉತ್ತರಿಸಿ.



ಅ. ಯಾವ ಆಹಾರದ ಗುಂಪು ಕಾಣೆಯಾಗಿದೆ? _____

ಆ. ನಾವು ಅದನ್ನು ತಿನ್ನದಿದ್ದರೆ ಏನಾಗಬಹುದು? _____

3. ಪ್ರತಿಯೊಂದು ಗುಂಪಿನಿಂದ ಒಂದೊಂದು ಆಹಾರ ಪದಾರ್ಥಗಳನ್ನು ಆಯ್ದುಕೊಂಡು ನಿಮ್ಮ ಮಧ್ಯಾಹ್ನದ ಊಟದ ತಟ್ಟೆಯನ್ನು ಸಿದ್ಧಪಡಿಸಿ.

ನಿಂಬೆ ಚಿತ್ರಾನ್ನ, ರಾಗಿ, ಗಂಜಿ, ಹಣ್ಣಿನ ಸಲಾಡ್, ಇಡಿಯಾಪ್ಪಂ, ಗೋಧಿ ದೋಸೆ, ಕರಿದ ಮೀನು, ಮೊಟ್ಟೆ ದೋಸೆ, ಬೇಳೆ ತೊವ್ವೆ, ಹಸಿ ಕಡಲೆ ಒಗ್ಗರಣೆ, ಮಾಂಸದ ಸಾರು, ತರಕಾರಿ ಸೆಲಾಡ್, ಕೋಸಂಬರಿ, ಸೊಪ್ಪಿನ ಪಲ್ಯ.

ಶಕ್ತಿ ನೀಡುವ ಆಹಾರ: _____



ದೇಹದ ಬೆಳವಣಿಗೆ ಆಹಾರ: _____

ದೇಹದ ರಕ್ಷಣಾತ್ಮಕ ಆಹಾರ: _____

4. ಕಾರ್ಯ ಯೋಜನೆ: ಒಂದು ದಿನದ ಉಪಹಾರಕ್ಕಾಗಿ ನೀವು ಏನನ್ನು ಸೇವಿಸಿದ್ದೀರಿ ಎಂಬುದನ್ನು ಪಟ್ಟಿ ಮಾಡಿ ಮತ್ತು ಪ್ರತಿಯೊಂದು ಆಹಾರದ ಗುಂಪುಗಳ ವಿವರವನ್ನು ಬರೆಯಿರಿ.

	ಆಹಾರಗಳು	ಶಕ್ತಿ ನೀಡುವುದು	ದೇಹದ ಬೆಳವಣಿಗೆ	ರಕ್ಷಣೆ
ಉಪಹಾರ				
ಊಟ				
ಭೋಜನ				

ತಮಿಳುನಾಡಿನ ವಿಶೇಷತೆಗಳು



ಶ್ರೀವಿಲ್ಲಿಪುತ್ತೂರ್ ಪಾಲ್ಕೋವಾ



ಕುಂಭಕೋಣಂ ಫಿಲ್ಟರ್ ಕಾಫಿ



ತೂತುಕುಡಿ ಮೆಕರೂನ್



ತಿರುನೆಲ್ವೇಲಿ ಹಲ್ವಾ



ಊಟಿ ವರ್ಕಿ

SD9AH

ನಿಮ್ಮ ಅಜ್ಜಿಯ ಊರಿಗೆ ಹೋಗಿ ಅಲ್ಲಿ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಅವರ ಊರಿನ ಪ್ರಸಿದ್ಧ ಆಹಾರದ ಬಗ್ಗೆ ಕೇಳಿ ಬರೆಯಿರಿ.

ಕಲಿಕಾ ಪರಿಶೀಲನೆ

1. ನಿಮ್ಮ ಊಟದಲ್ಲಿ ಬೇರುಗಳು ಮತ್ತು ಕಾಂಡಗಳಿಂದ ಮಾಡಿದ ಆಹಾರ ಪದಾರ್ಥಗಳು ಮಾತ್ರ ಇರುತ್ತವೆ. ಸಸ್ಯದ ಮತ್ತೊಂದು ಭಾಗವನ್ನು ಸೇರಿಸಲು ನೀವು ಯಾವ ಆಹಾರ ಪದಾರ್ಥಗಳನ್ನು ಸೇರಿಸಬೇಕು (✓) ಗುರುತು ಹಾಕಿ.

   ಅ. ಪಾಲಕ್ ಸೊಪ್ಪು ಆ. ಆಲೂಗಡ್ಡೆ ಇ. ಶುಂಠಿ ಈ. ಕ್ಯಾರೆಟ್

2. ತರಕಾರಿ ಬಿರಿಯಾನಿ ಸುವಾಸನೆ ಹೊಂದಿಲ್ಲದಿದ್ದರೆ ನೀವು ಏನು ಊಹಿಸಬಹುದು (✓) ಗುರುತು ಹಾಕಿ.

   ಅ) ಮಸಾಲೆ ಪದಾರ್ಥಗಳು ಸೇರಿಸದೆ ಇರಬಹುದು

   ಆ) ಸಾಕಷ್ಟು ತರಕಾರಿಗಳನ್ನು ಸೇರಿಸಿಲ್ಲ

3. ಚಿತ್ರವನ್ನು ನೋಡಿ ಸಸ್ಯಗಳ ಬೆಳವಣಿಗೆಯಲ್ಲಿ ಯಾವ ಹಂತಕ್ಕೆ ಅತಿ ಹೆಚ್ಚು ನೀರು ಅಗತ್ಯವಿದೆ (✓) ಗುರುತು ಹಾಕಿ.









4. ಮೂರು ಮುಖ್ಯ ಆಹಾರ ಗುಂಪುಗಳ ಆಹಾರ ಪದಾರ್ಥಗಳನ್ನು ಒಳಗೊಂಡಿರುವ ಸಮತೋಲನ ಆಹಾರ ತಟ್ಟೆ ಯಾವುದು? (✓) ಗುರುತು ಹಾಕಿ.





ಅ ◯

ಆ ◯

5. **ಮೌಖಿಕ ಪ್ರಶ್ನೆ :** ನೀವು ಅನುಸರಿಸುವ ಮೂರು ಆರೋಗ್ಯಕರ ಆಹಾರ ಪದ್ಧತಿಗಳನ್ನು ಹಂಚಿಕೊಳ್ಳಿ.

ನಾನು ಕಲಿತಿದ್ದು

- ಭತ್ತದ ಗದ್ದೆಯಿಂದ ನಮ್ಮ ತಟ್ಟೆಯವರೆಗೆ ಬರುವ ಅನ್ನದ ಪ್ರಯಾಣ ಮತ್ತು ಅದಕ್ಕೆ ಕಾರಣರಾದ ಜನರ ಪರಿಶ್ರಮ ಬಗ್ಗೆ ನಾನು ತಿಳಿದುಕೊಂಡೆ. ☆
- ವಿವಿಧ ಆಹಾರ ಪದಾರ್ಥಗಳು ಮತ್ತು ಪಾನೀಯಗಳಲ್ಲಿರುವ ಸಾಮಗ್ರಿಗಳ ಸಸ್ಯದ ಭಾಗಗಳನ್ನು ನಾನು ಗುರುತಿಸಬಲ್ಲೆ. ☆
- ಆರೋಗ್ಯಕರ ಊಟವನ್ನು ತಯಾರಿಸಲು ಶಕ್ತಿ ನೀಡುವ, ದೇಹವನ್ನು ಸದೃಢಗೊಳಿಸುವ ಮತ್ತು ರಕ್ಷಣೆ ನೀಡುವ ಆಹಾರ ಪದಾರ್ಥಗಳನ್ನು ನಾನು ಆಯ್ಕೆ ಮಾಡಬಲ್ಲೆ. ☆
- ನಾನು ಆರೋಗ್ಯಕರ ಆಹಾರ ಪದ್ಧತಿಗಳನ್ನು ಪಾಲಿಸುತ್ತೇನೆ ಮತ್ತು ಆಹಾರವನ್ನು ವ್ಯರ್ಥ ಮಾಡುವುದಿಲ್ಲ. ☆

ನನ್ನಿಂದ ಸಾಧ್ಯ

1. ನಿಮ್ಮ ಅಜ್ಜಿ ಬೇಳೆ ತೋವೆ ಮಾಡಲು ಬಯಸುತ್ತಾರೆ ಅವರು ಯಾವ ಗುಂಪಿನ ಬೀಜಗಳನ್ನು ಖರೀದಿಸಬೇಕು (✓) ಗುರುತು ಹಾಕಿ.

☐ ದ್ವಿದಳ ಧಾನ್ಯಗಳು ☐ ಧಾನ್ಯಗಳು ☐ ಎಣ್ಣೆ ಬೀಜಗಳು ☐ ಮಸಾಲೆಗಳು

2. ನಿಮ್ಮ ತಾಯಿ ತರಕಾರಿ ಬಿರಿಯಾನಿ ತಯಾರಿಸುತ್ತಿದ್ದಾರೆ ಪ್ರತಿ ಸಸ್ಯದ ಭಾಗದಿಂದ ಒಂದು ಆಹಾರ ಪದಾರ್ಥಗಳನ್ನು ಆಯ್ಕೆ ಮಾಡಿ.


ಹೂಕೋಸು


ಟೊಮೇಟೊ


ಕೊತ್ತಂಬರಿ ಸೊಪ್ಪು


ಕ್ಯಾರೆಟ್


ಶುಂಠಿ


ಅಕ್ಕಿ

ಬೇರು: _____ ಕಾಂಡ: _____

ಎಲೆ: _____ ಹಣ್ಣು: _____

ಹೂವು: _____ ಬೀಜ: _____

3. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ನಾವು ತಿನ್ನುವ ಮೂರು ಬೀಜಗಳ ಹೆಸರುಗಳನ್ನು ಬರೆಯಿರಿ _____ _____ _____

ನಾವು ತಿನ್ನುವ ಎರಡು ಬಗೆಯ ಸೊಪ್ಪುಗಳ ಹೆಸರುಗಳನ್ನು ಬರೆಯಿರಿ. _____ _____ _____

ನಿಮ್ಮ ಅಡುಗೆ ಮನೆಯಲ್ಲಿ ಬಳಸುವ ಒಂದು ಮಸಾಲೆ ಪದಾರ್ಥದ ಹೆಸರನ್ನು ಬರೆ.

_____ _____ _____.

4. ನಿಮ್ಮ ಮಧ್ಯಾಹ್ನದ ಊಟಕ್ಕೆ ಆರೋಗ್ಯಕರ ಆಹಾರದ ಪಟ್ಟಿಯನ್ನು ಸಿದ್ಧಪಡಿಸಿ.

ಊಟ	

5. ಗುಂಪಿಗೆ ಸೇರದಿರುವುದನ್ನು ಬರೆ.

ಹುರುಳಿ ಬೇಳೆ ಎಳ್ಳು ಉದ್ದಿನಬೇಳೆ ಕಡಲೆಕಾಳು

_____ಗುಂಪಿಗೆ ಸೇರುವುದಿಲ್ಲ ಏಕೆಂದರೆ ಇದು_____. (ಎಣ್ಣೆ ಬೀಜ / ಬೇಳೆಕಾಳು)

6. ಮೌಕಿಕ ಪ್ರಶ್ನೆಗಳು.

ಅ. ನಿಮ್ಮ ಸ್ನೇಹಿತ ತಟ್ಟೆಯಲ್ಲಿರುವ ಸ್ವಲ್ಪ ಅನ್ನವನ್ನು ಚೆಲ್ಲುತ್ತಾನೆ ನೀವು ನಿಮ್ಮ ಸ್ನೇಹಿತನಿಗೆ ಏನು ಹೇಳುತ್ತೀರಿ?

ಆ. ನಿಮ್ಮ ಆಹಾರವನ್ನುಗದ್ದೆಯಿಂದ ತಟ್ಟೆಗೆ ತರಲು ಸಹಾಯ ಮಾಡುವ ಇಬ್ಬರು ಸಹಾಯಕರನ್ನು ಹೆಸರಿಸಿ

7. ಯೋಜನೆ

ನಿಮ್ಮ ಅಡುಗೆ ಮನೆಯಲ್ಲಿ ಲಭ್ಯವಿರುವ 5 ವಿವಿಧ ಬೀಜಗಳನ್ನು ಸಂಗ್ರಹಿಸಿ ಪ್ರತಿಯೊಂದು ಬೀಜವನ್ನು ಎಚ್ಚರಿಕೆಯಿಂದ ಗಮನಿಸಿ ಮತ್ತು ಕೋಷ್ಟಕವನ್ನು ಪೂರ್ಣಗೊಳಿಸಿ.

ಬೀಜದ ಹೆಸರು	ಬೀಜದ ರೇಖಾಚಿತ್ರ	ಗುಂಪು ಧಾನ್ಯ / ದ್ವಿದಳ ಧಾನ್ಯ / ಎಣ್ಣೆ ಬೀಜ / ಮಸಾಲೆ

ನೀವು ಪ್ರತಿದಿನ ಯಾವ ಬೀಜವನ್ನು ಬಳಸುತ್ತೀರಿ? _____

ಕಲಿಕಾ ಪಯಣ

ಊಟವನ್ನು ಸಮತೋಲನಗೊಳಿಸಲು ಶಕ್ತಿ ನೀಡುವ ದೇಹವನ್ನು ಮತ್ತು ರಕ್ಷಣಾತ್ಮಕ ಆಹಾರವನ್ನು ಬಳಸುತ್ತಾರೆ.

ಅಕ್ಕಿಯ ಪ್ರಯಾಣವನ್ನು ವಿವರಿಸುವ ಮೂಲಕ ಮತ್ತು ರೈತರು ಹಾಗೂ ಇತರ ಸಹಾಯಕರ ಕೊಡುಗೆಯನ್ನು ಗುರುತಿಸುವ ಮೂಲಕ ಆಹಾರವು ನಮ್ಮ ತಟ್ಟೆಯನ್ನು ಹೇಗೆ ತಲುಪುತ್ತದೆ ಎಂಬುದನ್ನು ವಿವರಿಸುತ್ತಾರೆ ಮತ್ತು ಮೌಲ್ಯೀಕರಿಸುತ್ತಾರೆ.

ಸಸ್ಯಗಳಲ್ಲಿ ತಿನ್ನಬಹುದಾದ ಆಹಾರದ ಭಾಗಗಳಿಗೆ ಅನುಗುಣವಾಗಿ ವರ್ಗೀಕರಿಸುವುದು ಮತ್ತು ಸಾಮಾನ್ಯ ಅಡುಗೆಗಳಲ್ಲಿ ಬಳಸುವ ಪದಾರ್ಥಗಳನ್ನು ಗುರುತಿಸುತ್ತಾರೆ.

ಸಾಮಾನ್ಯ ಮರಗಳನ್ನು ಗುರುತಿಸುವುದು ಅವುಗಳ ಪರಿಸರ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಹೋಲಿಸುವುದು ಹಾಗೂ ಮರ ಗಿಡಗಳ ಆರೈಕೆಯ ನಿಯಮಗಳು ಮತ್ತು ನೈತಿಕತೆಯ ಸಂಪೂರ್ಣ ವಿವರಗಳನ್ನು ತಿಳಿಯುತ್ತಾರೆ.

ಇದು ಸಸ್ಯಗಳ ಬೇರು ಮತ್ತು ಕಾಂಡದ ರೂಪಾಂತರಗಳು ಹಾಗೂ ಅವುಗಳ ಹೊಂದಾಣಿಕೆಯನ್ನು ಅವುಗಳ ಕಾರ್ಯಗಳು ಮತ್ತು ಆವಾಸ ಸ್ಥಾನಗಳ ಆಧಾರದ ಮೇಲೆ ಗುರುತಿಸಿ ಹೋಲಿಸಿ ವರ್ಗೀಕರಿಸುತ್ತಾರೆ.



ವೀಕ್ಷಣೆ ದಾಖಲಿಸುವಿಕೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಮೂಲಕ ಸಸ್ಯದ ಬೆಳವಣಿಗೆಯ ಅವಶ್ಯಕತೆಯನ್ನು ಮತ್ತು ಸಸ್ಯದ ಭಾಗಗಳ ಕಾರ್ಯಗಳನ್ನು ವಿವರಿಸುತ್ತಾರೆ.

ಮೂರನೇ ತರಗತಿ

ಅವಧಿ - II

ಸಮಾಜ ವಿಜ್ಞಾನ



ಮುನ್ನುಡಿ

ತಮಿಳುನಾಡು ಪಠ್ಯಪುಸ್ತಕ ಮತ್ತು ಶೈಕ್ಷಣಿಕ ಸೇವೆಗಳ ನಿಗಮವು ಟಿಎನ್ ಸಿಎಫ್ 2025 ರ ಹೊಸ ಪಠ್ಯಕ್ರಮದ ಆಧಾರದ ಮೇಲೆ ಸಾಮಾಜಿಕ ವಿಜ್ಞಾನ ಪಠ್ಯಪುಸ್ತಕವನ್ನು ಸಿದ್ಧಪಡಿಸಿದೆ ಈ ಪಠ್ಯಪುಸ್ತಕವು ಮಕ್ಕಳ ದೈನಂದಿನ ಜೀವನದ ಅನುಭವಗಳೊಂದಿಗೆ ಕಲಿಕೆಯ ರೂಪುಗೊಳಿಸುವ ಗುರಿಯನ್ನು ಹೊಂದಿದೆ.

ಈ ಪಠ್ಯಪುಸ್ತಕವು ತಮಿಳುನಾಡು ಶಿಕ್ಷಣ ನೀತಿಯಲ್ಲಿ ಶಿಫಾರಸು ಮಾಡಿದಂತೆ ಎಲ್ಲರನ್ನು ಒಳಗೊಳ್ಳುವಿಕೆ ಸಂವಿಧಾನಿಕ ಮೌಲ್ಯಗಳನ್ನು ಪಾಲಿಸುವುದು.ವಯಸ್ಸಿನ ಅನುಗುಣವಾಗಿ ಜಾತಿ, ಲಿಂಗ ಮತ್ತು ವೈವಿಧ್ಯತೆ ಬಗ್ಗೆ ಜಾಗೃತ ತಿಳುವಳಿಕೆಯನ್ನು ಬೆಳೆಸುವುದು, ಸ್ಥಳ ಪರಂಪರೆಯನ್ನು ಸಂಯೋಜಿಸಿ ಅರ್ಥ ಮಾಡಿಕೊಳ್ಳುವುದು ಪರಿಸರ ಸಾಕ್ಷರತೆ, 21ನೇ ಶತಮಾನದ ಕೌಶಲ್ಯಗಳು ಮತ್ತು ಸಾಮಾಜಿಕ ಭಾವನಾತ್ಮಕ ಕಲಿಕೆಯನ್ನು ಬಲಗೊಂಡಿದೆ.

ಕಲಿಕೆಯ ಪ್ರಗತಿ

ಸಮಾಜ ವಿಜ್ಞಾನ ಪಠ್ಯಪುಸ್ತಕವು ಕಲಿಯುವ ವರ ಜೀವನಕ್ಕೆ ಹತ್ತಿರವಿರುವ ಅವರ ಸ್ವಯಂ ಗುರುತು ಕುಟುಂಬ, ತರಗತಿ ಮತ್ತು ಸುತ್ತಮುತ್ತಲಿನ ಪರಿಸರದಂತಹ ವಿಷಯಗಳೊಂದಿಗೆ ಪ್ರಾರಂಭವಾಗುತ್ತದೆ. ಹಂತ ಹಂತವಾಗಿ ಇದು ಸಾಮಾಜಿಕ ಸಂಸ್ಥೆಗಳು, ಸಾಂಸ್ಕೃತಿಕ ಆಚರಣೆಗಳು ಮತ್ತು ನೈಸರ್ಗಿಕಪರಿಸರ ದಂತಹ ವಿಶಾಲವಾದ ವಿಷಯಗಳನ್ನು ವಿವರಿಸುತ್ತದೆ.

ಘಟಕ ಒಂದು 1: ಕಥೆ ಹೇಳುವ ಪೆಟ್ಟಿಗೆ

- ದಿನನಿತ್ಯ ಬಳಕೆಯ ವಸ್ತುಗಳಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳುವುದು.
- ಕಥೆಗಳು ವಸ್ತುಗಳು ಸ್ಥಳಗಳು ಜನರ ನೆನಪುಗಳು ಮುಂತಾದವುಗಳ ಮೂಲಕ ಇತಿಹಾಸವನ್ನು ತಿಳಿದುಕೊಳ್ಳುವುದು.
- ಆಧುನಿಕತೆಯ ಜೀವನವನ್ನು ಪ್ರಾಚೀನಕಾಲದ ತಮಿಳರ ಜೀವನವನ್ನು (ಆಹಾರ, ಉಡುಪು, ಆಟ) ತಿಳಿದುಕೊಳ್ಳುವುದು

ಘಟಕ ಎರಡು 2: ಪಯಣದ ಹಾದಿ

- ಪ್ರಾಚೀನ ಕಾಲದ ಜನರು ಮತ್ತು ವಸ್ತುಗಳನ್ನು ಸಾಗಿಸಿಕೊಂಡು ಹೋಗಲು ಪ್ರಾಣಿಗಳು ಮುಖ್ಯ ಪಾತ್ರ ವಹಿಸಿದಬಗ್ಗೆ ತಿಳಿದುಕೊಳ್ಳುವುದು.
- ಪ್ರಾಚೀನ ಕಾಲದ ಸಾರಿಗೆಯ ಬಗೆಗಳನ್ನು ಆಧುನಿಕ ಕಾಲದ ಸಾರಿಗೆಯ ವಾಹನಗಳನ್ನು ಅರ್ಥ ಮಾಡಿಕೊಳ್ಳುವುದು.

ಪಠ್ಯಪುಸ್ತಕದ ಪ್ರಮುಖ ಲಕ್ಷಣಗಳು

- ವಿದ್ಯಾರ್ಥಿಗಳ ದೃಷ್ಟಿಕೋನಗಳನ್ನು ಗೌರವಿಸುವುದು.
- ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಅವಕಾಶಗಳನ್ನು ಒದಗಿಸುವುದು.
- ತರಗತಿಯಲ್ಲಿ ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು.

ಚರ್ಚಿಸಿ ಮತ್ತು ಕಲಿಯಿರಿ



- ತೀವ್ರವಾಗಿ ಗಮನಿಸಿ ಮತ್ತು ಚರ್ಚಿಸಿ.
- ಪ್ರಶ್ನೆಗಳ ಮೂಲಕ ಚರ್ಚಿಸಿ.
- ಸಂಬಂಧಗಳನ್ನು ಕಲ್ಪಿಸುವ ಮೂಲಕ ಚರ್ಚಿಸಿ.

ಹಂಚಿಕೊಳ್ಳೋಣ



- ವೈವಿಧ್ಯತೆಯನ್ನು ಗೌರವಿಸುವುದು.
- ತನ್ನನ್ನು ಇತರರಸ್ಥಾನದಲ್ಲಿರಿಸಿ ಯೋಚಿಸುವುದು.
- ತನ್ನ ಅಭಿಪ್ರಾಯಗಳನ್ನು ಆತ್ಮವಿಶ್ವಾಸದಿಂದ ವ್ಯಕ್ತಪಡಿಸುವುದು.

ಬನ್ನಿ ಚಿತ್ರ ಬಿಡಿಸೋಣ / ಬನ್ನಿ ಆಡೋಣ / ಬನ್ನಿ ನಟಿಸೋಣ

- ಕಲೆಗಳ ಸಂಯೋಜನೆ.
- ಸೃಜನಶೀಲತೆ.
- ಒಟ್ಟಾಗಿ ಕಲಿಯುವುದು.



ಬನ್ನಿ ಬರೆಯೋಣ



- ಸಂವಹನ.
- ಘಟನೆಗಳ ಅನುಕ್ರಮ.
- ಆಲೋಚನೆಗಳನ್ನು ಪ್ರತಿಬಿಂಬಿಸುವುದು.

ಸಾಮರ್ಥ್ಯ ಆಧರಿತ ಸಮಗ್ರಹ ಮೌಲ್ಯಮಾಪನ

ಮೌಲ್ಯಮಾಪನವು ಕೇವಲ ಕಂಠಪಾಠಕಿಂತ ಹೆಚ್ಚಾಗಿ ವೀಕ್ಷಣೆ ಭಾಗವಹಿಸುವಿಕೆ ಮತ್ತು ಸರಳ ಪ್ರತಿಫಲಿತ ಚಟುವಟಿಕೆಗಳ ಆಧಾರದ ಮೇಲೆ ಸಾಮರ್ಥ್ಯ ಆಧಾರಿತ ಸಮಗ್ರ ಮೌಲ್ಯಮಾಪನವಾಗಿರಲು ಉದ್ದೇಶಿಸಲಾಗಿದೆ.

ಕಲಿಕೆಯ ಮೌಲ್ಯಮಾಪನ



ಪ್ರತಿ ಪ್ರಮುಖ ಪಠ್ಯ ವಸ್ತುವಿನ ನಂತರ

- ಲಿಖಿತ ಪರೀಕ್ಷೆ
- ಮೌಖಿಕ ಪರೀಕ್ಷೆ
- ಕಾರ್ಯಯೋಜನೆ ಎಂಬ ವಿವಿಧ ಮೌಲ್ಯಮಾಪನ ವಿಧಾನಗಳನ್ನು ಬಳಸಿ ಮೌಲ್ಯಮಾಪನ ಮಾಡಿ.

ಸ್ವಯಂ ಮೌಲ್ಯಮಾಪನ



ಪ್ರತಿಘಟ್ಟದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಪ್ರಗತಿಯನ್ನು ಸ್ವಯಂ ಮೌಲ್ಯಮಾಪನ ಮಾಡಲು ಅವಕಾಶಗಳನ್ನು ನೀಡಲಾಗುತ್ತದೆ.

ಈ ಅಡಿಪಾಯದ ಹಂತದಲ್ಲಿ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ವ್ಯವಸ್ಥಿತ ವಿಧಾನದೊಂದಿಗೆ ಗಮನಿಸಲು ಪ್ರಶ್ನೆಗಳನ್ನು ಎತ್ತಲು ಮತ್ತು ಅವುಗಳ ಬಗ್ಗೆ ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ಪ್ರಾರಂಭಿಸುತ್ತಾರೆ ಈ ಸಮಾಜ ವಿಜ್ಞಾನ ಪಠ್ಯಪುಸ್ತಕವು ಮಕ್ಕಳ ಸಾಮಾಜಿಕ ಕುತೂಹಲ ವೈವಿಧ್ಯತೆಗೆ ಬಗ್ಗೆ ಮೆಚ್ಚುಗೆ ಮತ್ತು ಸಮಾಜ ಹಾಗೂ ಪರಿಸರದ ಬಗ್ಗೆ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಪರಿವಿಡಿ

ಘಟಕ –1

ಕಥೆ ಹೇಳುವ ಪೆಟ್ಟಿಗೆ

ಅಜ್ಜನ ಲೇಖನಿ....! 124

ಮುಗಿಲನ ಕನಸಿನಲ್ಲಿ.....! 128

ಅಜ್ಜನ ದಿನಚರಿ...! 135

ಕಥೆ ಕೇಳು! ಕಥೆ ಕೇಳು! 140





ಘಟಕ –2

ಪಯಣದ ಹಾದಿ

ಪಾದಚಾರಿ ಪಯಣ...! 145

ಎತ್ತಿನ ಗಾಡಿ ಪಯಣ...! 150

ಕುದುರೆ ಗಾಡಿ ಪಯಣ...! 153

SZ2VM
e-book

XV8QZ
Inclusive book

AY8YR
THB

PA4OW
Assessment

ಘಟಕ
1

ಕಥೆ ಹೇಳುವ ಪೆಟ್ಟಿಗೆ

KP8IS

ಅಜ್ಜನ ಲೇಖನಿ....!



ಚರ್ಚಿಸಿ ಕಲಿಯೋಣ

ಮುಗಿಲನ ಮನೆಯಲ್ಲಿ ಬಣ್ಣ ಬಳಿಯುವ ಕೆಲಸ ನಡೆಯುತ್ತಿತ್ತು. ಮನೆಯ ಅಟ್ಟದ ಮೇಲಿದ್ದ ಹಳೆಯ ವಸ್ತುಗಳನ್ನು ಮುಗಿಲನ ತಾತ ಮತ್ತು ಅಪ್ಪ ಕೆಳಗೆ ಇಳಿಸುತ್ತಿದ್ದರು. ಆಗ ಅಪ್ಪ ಒಂದು ಮರದ ಪೆಟ್ಟಿಗೆಯನ್ನು ಇಳಿಸಲು ತಯಾರಾಗಿದ್ದರು.



ತಾತ: ಅದನ್ನು ಜೋಪಾನವಾಗಿ ಎಚ್ಚರಿಕೆಯಾಗಿ ಕೊಡು!

ಅಪ್ಪ: ಸರಿ ಅಪ್ಪ, ಇದು ನಿಮ್ಮ ನಿಧಿ ಪೆಟ್ಟಿಗೆಯಲ್ಲವೇ! ಇದರ ಪ್ರಾಮುಖ್ಯತೆಯನ್ನು ನಾನು ಚೆನ್ನಾಗಿ ತಿಳಿದಿರುವೆನು.

ಮುಗಿಲನ್: ನಿಧಿ ಪೆಟ್ಟಿಗೆಯಾ? ಹಾಗಾದರೆ ಪೆಟ್ಟಿಗೆ ತುಂಬಾ ಚಿನ್ನದ ಕಾಸುಗಳು ಇದೆಯೇ?



ತಾತ: ಇಲ್ಲ ಮುಗಿಲನ್! ಈ ವಸ್ತುಗಳೆಲ್ಲವೂ ನಾನು ಶೇಖರಿಸಿದವುಗಳು ಮತ್ತು ಉಪಯೋಗಿಸಿದವುಗಳು. ನಿನಗೆ ತೋರಿಸುತ್ತೇನೆ.



ಮುಗಿಲನ್: ತಾತ... ಏನಿದು? ತುಕ್ಕು ಹಿಡಿದ ಹಳೆಯ ಮೊಳೆಯ ರೀತಿ ಇದೆಯಲ್ಲ?

ತಾತ: ಇದುವೇ ಪ್ರಾಚೀನ ಲೇಖನಿ.

ಮುಗಿಲನ್: ಪ್ರಾಚೀನ ಲೇಖನಿಯಾ? ಹಾಗಂದರೆ ಏನು ತಾತ?

ತಾತ: ಈಗ ಯಾವುದರಿಂದ ಬರೆಯುತ್ತೀಯಾ?

ಮುಗಿಲನ್: ಲೇಖನಿಯಿಂದ ಬರೆಯುತ್ತೇನೆ ತಾತ.

ತಾತ: ಇದು ನನ್ನ ತಾತ ಉಪಯೋಗಿಸಿದ ಲೇಖನಿ. ಅದೇ ರೀತಿ ಹಲವು ವಸ್ತುಗಳು ಪೆಟ್ಟಿಗೆಯೊಳಗೆ ಇವೆ. ನೀನು ಇದುವರೆಗೆ ನೋಡಿರದವುಗಳು. ನಿನಗೆ ಆಶ್ಚರ್ಯವನ್ನು ತರುವಂತಹವುಗಳು!

ಬನ್ನಿ ಮಾತನಾಡೋಣ

ಪ್ರಾಚೀನ ವಸ್ತುಗಳೆಲ್ಲವೂ ಮೌಲ್ಯಯುತವಾದವುಗಳಾಗಿ ಇರುತ್ತವೆ ಎಂದು ನಿಮಗೆ ಅನಿಸುತ್ತಿದೆಯೇ? ನೀವು ರಕ್ಷಣೆ ಮಾಡಲು ಇಷ್ಟಪಡುವ ಒಂದು ವಸ್ತು ಯಾವುದು? ಏಕೆ?

ಕಂಡುಹಿಡಿಯೋಣ

1. ಒಗಟುಗಳಿಗಿರುವ ಉತ್ತರಗಳನ್ನು ಬರೆದು ಅದಕ್ಕೆ ಸೂಕ್ತವಾದ ಚಿತ್ರಗಳನ್ನು ಬರೆಯಿರಿ.

(ಬಾಚಣಿಗೆ ದಾಳ ಬುಗುರಿ ಪ್ರಾಚೀನ ಲೇಖನಿ)

ನಾನು ಹಲವು ಹಲ್ಲುಗಳನ್ನು ಹೊಂದಿದ್ದೇನೆ.
ಒಬ್ಬರನ್ನು ಕಚ್ಚುವುದಿಲ್ಲ.
ನಾನು ಯಾರು?



ದೇಹ ಪೂರ್ತಿ ಕಬ್ಬಿಣ.
ತುದಿ ಮಾತ್ರ ಹರಿತ.
ಅಕ್ಷರಗಳನ್ನು ಬರೆಯುವೆನು.
ನಾನು ಯಾರು?



ಉರುಳುಸಿದರೆ ಉರುಳುವೆನು.

_____

_____



_____

_____

_____

_____



ಮಕ್ಕಳನ್ನು ಹೆಚ್ಚಾಗಿ ಒಗಟುಗಳನ್ನು ರಚಿಸಲು ಪ್ರೋತ್ಸಾಹಿಸಿರಿ ಅವುಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.



ಬನ್ನಿ ಚಿತ್ರಬಿಡಿಸೋಣ

ಚಿತ್ರವನ್ನು ಪೂರ್ಣಗೊಳಿಸಿ, ಬಣ್ಣ ಹಚ್ಚಿರಿ.



ನಿಮಗೆ ತಿಳಿದಿದೆಯೇ?

ಕೀಳಡಿ ಉತ್ಖನನದಲ್ಲಿ ಕಂಡುಹಿಡಿದಿರುವ ಮಡಕೆಯ ಚೂರುಗಳು.



ಆದನ್
(atan)



ಕುವಿರನ್ ಆದನ್
(kuviran atan)



ಅರ
(ara)



ಅ
(A)

ಪ್ರಾಚೀನ ಕಾಲದ ಜನರು ವ್ಯಾಪಕವಾಗಿ ಸಾಕ್ಷರರಾಗಿದ್ದರು ಎಂಬುದನ್ನು ಮಡಕೆಗಳ ಮೇಲಿನ ಬರವಣಿಗೆಯಿಂದ ಸಾಕ್ಷೀಕರಿಸಲಾಗಿದೆ.



ಮುಗಿಲನ ಕನಸಿನಲ್ಲಿ...!

ಚರ್ಚಿಸಿ ಕಲಿಯಿರಿ



ತಾತನ ನಿಧಿಯ ಪೆಟ್ಟಿಗೆಯಲ್ಲಿ ಹಲವು ವಸ್ತುಗಳು ಇದ್ದವು. ಅವುಗಳು ಮುಗಿಲನನ್ನು ಬೆರಗುಗೊಳಿಸಿದವು. ಆದರೆ ಪ್ರಾಚೀನ ಲೇಖನಿ ಮಾತ್ರ ಅವನ ಮನಸ್ಸಿನಿಂದ ಎಂದಿಗೂ ಮರೆಯಾಗಲಿಲ್ಲ. ಅದೇ ಆಲೋಚನೆಯೊಂದಿಗೆ / ನೆನಪಿನಿಂದ ಮಲಗಲು ಹೊರಟನು ಮುಗಿಲನ್.

ಕ್ರಿಕ್... ಬಟ್!

ಎಂಬ ಶಬ್ದ ಕೇಳಿಸಿತು. ಅದರ ನಂತರ ಮುಗಿಲನ್...! ಮುಗಿಲನ್...! ಎಂದು ಯಾರೊ ತನ್ನನ್ನು ಕರೆಯುವಂತೆ ಶಬ್ದ ಕೇಳಿ ಮುಗಿಲನ್ ಎಚ್ಚರಗೊಳ್ಳುತ್ತಾನೆ.

"ಅದು ಯಾವ ಶಬ್ದ?"

ಅನಿರೀಕ್ಷಿತವಾಗಿ ಪ್ರಾಚೀನ ಲೇಖನಿ ತಾತನ ನಿಧಿಯ ಪೆಟ್ಟಿಗೆಯ ಬಳಿಯಿಂದ ಮಾತನಾಡಲು ಪ್ರಾರಂಭಿಸಿತು.





ನೀನು ನನ್ನನ್ನೇ ನೆನಪಿಸಿಕೊಂಡಿದ್ದರಿಂದ
ನಿಮ್ಮ ಜೊತೆ ಮಾತನಾಡಲು ಬಂದೆ
ಮುಗಿಲನ್...!"

ನಾನು "ಪ್ರಾಚೀನ ಲೇಖನಿ"

ಪ್ರಾಚೀನ ಕಾಲದ ಲೇಖನಿ! ಚಮತ್ಕಾರದ
ಲೇಖನಿ!

ಯಾಕೆ ಗೊತ್ತಾ?

ನನಗೆ ಬರೆಯಲು ಕಾಗದದ ಅವಶ್ಯಕತೆಯೂ
ಇಲ್ಲ. ಶಾಯಿಯು ಅಗತ್ಯವೂ ಇಲ್ಲ.

ಏನು ಬೇಕು ಗೊತ್ತಾ?

ಕೇವಲ ಒಂದು ತಾಳೆಗರಿ ಮಾತ್ರ ಸಾಕು.

ಅವರು ನನ್ನನ್ನು ಬಳಸಿಕೊಂಡು ತಾಳೆಗರಿಯ
ಮೇಲೆ ಬರೆಯುತ್ತಾರೆ ಅದಕ್ಕೆ "ತಾಳೆಯೋಲೆ"
ಎಂದು ಹೆಸರು.

ಎಲೆಯ ನರಗಳು / ನಾಳಗಳು ನೇರವಾಗಿರುತ್ತದೆ.
ನನಗೆ ಹರಿತವಾದ ಅಂಚು. ಕೆಲವೊಮ್ಮೆ
ತಾಳೆಗರಿಯೂ ಹರಿದು ಹೋಗುತ್ತದೆ.
ಬರಹಗಾರನ ಕೈಗೂ ಗಾಯವಾಗುತ್ತದೆ.
ಹಾಗಾಗಿ ಅವರು ನನ್ನನ್ನು
ಎಚ್ಚರಿಕೆಯಿಂದ ನೋಡಿ
ಬಳಸುತ್ತಾರೆ.

ನನ್ನ ಅಕ್ಷರಗಳನ್ನು ಅಳಿಸಲು ಸಾಧ್ಯವಿಲ್ಲ ಆದ್ದರಿಂದ ಅವರು ತಪ್ಪುಗಳಿಲ್ಲದೆ ಎಚ್ಚರಿಕೆಯಿಂದ ಬರೆಯುತ್ತಾರೆ.

ನಿಮ್ಮ ಲೇಖನಿ ಒಮ್ಮೆ ಮಾತ್ರ ಉಪಯೋಗಿಸಲ್ಪಡುವುದು

ಆದರೆ ನನ್ನನ್ನು ನೋಡು ಮುಗಿಲನ್!

ಹಲವು ವರ್ಷಗಳು ಕಳೆದಿವೆ!

ನಾನು ಇನ್ನೂ ನಿಮ್ಮ ಅಜ್ಜನ ಪೆಟ್ಟಿಗೆಯಲ್ಲಿ ನಿಧಿಯಾಗಿದ್ದೇನೆ.

ನನಗೆ ತುಂಬಾ ಹೆಮ್ಮೆ ಇದೆ."



"ಮುಗಿಲನ್...! ಎದ್ದೇಳು! ಶಾಲೆಗೆ ಹೋಗುವ ಸಮಯವಾಯಿತು." ತಾಯಿಯ ಧ್ವನಿಗೆ ಮುಗಿಲನು ಕನಸಿನಿಂದ ಎಚ್ಚರಗೊಂಡು ಇದೆಲ್ಲ ಕನಸೇ? ಎಂದು ನಕ್ಕನು. ತನ್ನ ಕನಸನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲು ಶಾಲೆಗೆ ಹೊರಟನು.

ನಿಮಗೆ ತಿಳಿದಿದೆಯೇ?



ಕಬ್ಬಿಣದಿಂದ ಮಾಡಿದ ಪ್ರಾಚೀನ ಲೇಖನಿ ಮಾತ್ರವಲ್ಲದೆ, ತಾಮ್ರ, ಕಂಚು, ಆನೆ ದಂತದಿಂದ ಮಾಡಿದ ಪ್ರಾಚೀನ ಲೇಖನಿಗಳು ಉಪಯೋಗದಲ್ಲಿ ಇದ್ದವು.

ಪ್ರಾಚೀನ ಲೇಖನಿಯಿಂದ ಲೇಖನಿಯವರೆಗೆ...



ಪ್ರಾಚೀನ ಕಾಲದ ಜನರು, ಬಂಡೆಗಳಲ್ಲಿ ಮಡಕೆಗಳಲ್ಲಿ ಚಿತ್ರಗಳನ್ನು ಬಿಡಿಸಿದರು. ನಂತರ ಬಂಡೆಗಳಲ್ಲಿ ಕೆತ್ತನೆಗಳನ್ನು ರಚಿಸಿದರು.



ನಂತರ, ಮಣ್ಣಿನ ಮಡಕೆಗಳಲ್ಲಿ ಕಬ್ಬಿಣದ ಚೂಪಾದ ಉಪಕರಣಗಳನ್ನು ಬಳಸಿ ಸಂಕೇತಗಳನ್ನು ಕೆತ್ತಿದರು.



ನಂತರ, ಗುಹೆಗಳಲ್ಲಿ 'ಕನ್ನಡ' ಎಂಬ ಅಕ್ಷರಗಳನ್ನು ಕಬ್ಬಿಣದ ಚೂಪಾದ ಉಪಕರಣಗಳನ್ನು ಬಳಸಿ ಬರೆಯಲು ಪ್ರಾರಂಭಿಸಿದರು.



ನಂತರ, ಚೂಪಾದ ತುದಿಯನ್ನು ಹೊಂದಿರುವ ಪ್ರಾಚೀನ ಲೇಖನಿಯನ್ನು ಬಳಸಿ ತಾಳೆಗರಿಗಳಲ್ಲಿ ಬರೆಯಲು ಪ್ರಾರಂಭಿಸಿದರು.



ನಂತರ, ಪಕ್ಷಿಗಳ ರೆಕ್ಕೆಗಳಲ್ಲಿ ಶಾಯಿಯಲ್ಲಿ ಅದ್ದಿ ಬಟ್ಟೆಗಳಲ್ಲಿ ಬರೆದರು.



ತದನಂತರ ಲೇಖನಿಯಲ್ಲಿ ಶಾಯಿ ತುಂಬಿಸಿ ಕಾಗದದಲ್ಲಿ ಬರೆದರು.



ನಂತರ, ಸ್ಪರ್ಶ ಪರದೆ ಲೇಖನಿಯನ್ನು ಉಪಯೋಗಿಸುತ್ತೇವೆ.

ನಿಮಗೆ ತಿಳಿದಿದೆಯೇ?

ತಮಿಳುನಾಡಿನಲ್ಲಿ ಕೀಳ್‌ವಾಲೈ, ಕರಿಕೈಯೂರು, ಕೋಡಾಂದೂರು, ಮೈಲಾಡುಂಪಾರೈ, ಚಿತ್ತನ್‌ವಾಸಲ್, ಮಲ್ಲಪ್ಪಾಡಿ ಮುಂತಾದ ಸ್ಥಳಗಳಲ್ಲಿ ಗುಹೆ ಮತ್ತು ಬಂಡೆ ಚಿತ್ರಕಲೆಗಳು ಕಂಡುಹಿಡಿಯಲಾಗಿದೆ.

ಬನ್ನಿ ಮಾತನಾಡೋಣ

ಪ್ರಾಚೀನ ಕಾಲದ ಒಂದು ವಸ್ತುವನ್ನು ಮಾತ್ರ ಬಳಕೆಗೆ ತರಲು ಸಾಧ್ಯವಾದರೆ, ಯಾವ ವಸ್ತುವನ್ನು ಆಯ್ಕೆ ಮಾಡುವಿರಿ? ಅದನ್ನು ಯಾವುದಕ್ಕೆ ಉಪಯೋಗಿಸುತ್ತೀರಿ?

ಕಂಡುಹಿಡಿಯೋಣ

1. ಚಿತ್ರಗಳಿಗೆ ಸೂಕ್ತವಾದ ಪದಗಳನ್ನು ಬರೆದು ಪ್ರಾಚೀನ ಕಾಲದ ವಸ್ತುಗಳೊಂದಿಗೆ ಆಧುನಿಕ ಕಾಲದ ವಸ್ತುಗಳನ್ನು ಸೇರಿಸಿ ಮಾರ್ಗದರ್ಶನ ನೀಡುವುದು.

(ಬ್ರಷ್, ವಿದ್ಯುತ್ ದೀಪ, ಪ್ರಾಚೀನ ಲೇಖನಿ, ತಾಳೆಗರಿ,
ಬೇವಿನ ಕಡ್ಡಿ, ಪುಸ್ತಕ, ಆಧುನಿಕ ಲೇಖನಿ, ಲಾಟಿನ್)



2. ಕೊಟ್ಟಿರುವ ಸೂಚನೆಗಳಿಗೆ ಸೂಕ್ತವಾದ ಪದಗಳಿಗೆ ಬಣ್ಣ ಹಚ್ಚಿರಿ.

ಪ್ರಾಚೀನ ಕಾಲದಲ್ಲಿ ಮಾತ್ರ ಇದ್ದವುಗಳು

ಆಧುನಿಕ ಕಾಲದಲ್ಲಿ ಇರುವವುಗಳು

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಇರುವವುಗಳು

ಬೆಂಕಿ ಚೆಂಡು	◯	ಪ್ರಾಚೀನ ಲೇಖನಿ	◯	ಇಂಧನ ಒಲೆ	◯
ಮಹಡಿ ಮನೆ	◯	ವಾರ್ತಾಪತ್ರಿಕೆ	◯	ಲೋಹದ ಪಾತ್ರೆ	◯
ಮೊಬೈಲ್	◯	ತಾಳೆಯೋಲೆ	◯	ಅರೆಯುವ ಕಲ್ಲು	◯

ಬನ್ನಿ ಚಿತ್ರಬಿಡಿಸೋಣ

ಕಾಲಕ್ಕೆ ತಕ್ಕಂತೆ ಬದಲಾಗಿರುವ ವಸ್ತುಗಳನ್ನು ಚಿತ್ರ ಬರೆದು ಬಣ್ಣ ಹಚ್ಚಿರಿ.

ಪ್ರಾಚೀನ ಕಾಲ	ಆಧುನಿಕ ಕಾಲ
	
	
	

ಕೊನೆಯಲ್ಲಿರುವ ಚೌಕದಲ್ಲಿ ಮಕ್ಕಳು ತಮಗೆ ಇಷ್ಟ ಬಂದ ಚಿತ್ರವನ್ನು ಬರೆದು ಬಣ್ಣ ಹಚ್ಚಲು ಮಾರ್ಗದರ್ಶಿಸುವುದು.



ಕಲಿಕಾ ಪಯಣ

1. ಸರಿಹೊಂದುವ ಪದಗಳಿಂದ ಖಾಲಿ ಬಿಟ್ಟ ಸ್ಥಳಗಳನ್ನು ಪೂರ್ತಿ ಮಾಡು.

(ವಿದ್ಯುತ್ ಪಂಖ, ಪುಸ್ತಕ, ಅರೆಯುವ ಕಲ್ಲು, ವಿದ್ಯುತ್ ಒಲೆ)

ಅ) ತಾಳೆಗರಿ ಪ್ರಾಚೀನ ಕಾಲ: _____ ಆಧುನಿಕ ಕಾಲ.

ಆ) _____ ಪ್ರಾಚೀನ ಕಾಲ : ಮಿಕ್ಸಿ ಆಧುನಿಕ ಕಾಲ.

ಇ) ತಾಳೆಗರಿ, ಬೀಸಣಿಗೆ ಪ್ರಾಚೀನ ಕಾಲ: _____ ಆಧುನಿಕ ಕಾಲ.

ಈ) ಸೌದೆ ಒಲೆ ಪ್ರಾಚೀನ ಕಾಲ: _____ ಆಧುನಿಕ ಕಾಲ.

ಉ) _____ ಪ್ರಾಚೀನ ಕಾಲ _____ ಆಧುನಿಕ ಕಾಲ.

ಮಕ್ಕಳು ಪ್ರಶ್ನೆಗಳನ್ನು ಯೋಚಿಸಿ ನಿಧಾನವಾಗಿ ಬರೆಯಲು ಮಾರ್ಗದರ್ಶಿಸುವುದು.

2. ಮೌಖಿಕ ಪ್ರಶ್ನೆ : ಸುತ್ತು! ಮಾತನಾಡು!

CV9MV



1. ರಟ್ಟನ್ನು ಸುತ್ತುವುದು
2. ಬಾಣದ ಗುರುತು ತೋರಿಸುವ ವಸ್ತುಗಳ ಬಗ್ಗೆ ಮಾತನಾಡುವುದು.

ಶಿಕ್ಷಕರ ಕೈಪಿಡಿ

ಮಕ್ಕಳು ವೃತ್ತಾಕಾರದ ರಟ್ಟಿನಲ್ಲಿರುವ ವಸ್ತುಗಳ ಬಗ್ಗೆ ಮಾತನಾಡಲು ಕೈಪಿಡಿಯಲ್ಲಿರುವ ಮಾರ್ಗೋಪಾಯಗಳನ್ನು ಅನುಸರಿಸುವುದು.



3. ಕಾರ್ಯ ಯೋಜನೆ : ತಾಳೆಗರಿಯ ಮಾದರಿ ಒಂದನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸುವುದು.

ಶಿಕ್ಷಕರ ಕೈಪಿಡಿ

ಶಿಕ್ಷಕರ ಕೈಪಿಡಿಯಲ್ಲಿ ಕೊಟ್ಟಿರುವ ಮಾರ್ಗೋಪಾಯಗಳನ್ನು ಅನುಸರಿಸಿ ಮಕ್ಕಳು ಕಾರ್ಯಯೋಜನೆಯನ್ನು ಪೂರ್ಣ ಮಾಡಲು ಮಾರ್ಗದರ್ಶನ ನೀಡುವುದು.



ನಾನು ಕಲಿತದ್ದು

ನಾನು ತಿಳಿದುಕೊಂಡಿದ್ದಕ್ಕೆ ಬಣ್ಣ ಹಚ್ಚುವೆನು

ನನ್ನಿಂದ,

1. ದಿನನಿತ್ಯ ಉಪಯೋಗಿಸುವ ವಸ್ತುಗಳಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಹೋಲಿಕೆ ಮಾಡಿ ಹೇಳಲು ಸಾಧ್ಯ.
2. ಕಥೆಗಳು, ವಸ್ತುಗಳು, ಸ್ಥಳಗಳು, ಜನರ ನೆನಪುಗಳು ಮುಂತಾದವುಗಳ ಮುಖಾಂತರ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ.

ಅಜ್ಜನ ದಿನಚರಿ...!

ಆಂದು ಸಂಜೆ ಸುಮತಿಯು ಭಾನುವು ನಿಧಿಯ ಪೆಟ್ಟಿಗೆಯನ್ನು ನೋಡಲು ಮುಗಿಲನ ಮನೆಗೆ ಬರುವರು.

ಚರ್ಚಿಸಿ ಕಲಿಯೋಣ



ತಾತ: ಬನ್ನಿ ನಾನು ನಿಮಗೆ ಒಂದು ಭಾವಚಿತ್ರ ತೋರಿಸುತ್ತೇನೆ.

ಮುಗಿಲನ್: ತಾತ! ಇದು ಯಾರ ಭಾವಚಿತ್ರ? ನೋಡುವುದಕ್ಕೆ ಅವರು ನನ್ನ ತಂದೆಯಂತೆ ಕಾಣುತ್ತಾರೆ!



ತಾತ: ಇದು ನಾನೇ ಮುಗಿಲ!

ಮುಗಿಲನ್: ತಾತ ನೀವಾ! ಇದು ಯಾವ ಪುಸ್ತಕ? ನೀವು ಇದನ್ನು ಏಕೆ ಸಂರಕ್ಷಿಸಿ ಇಟ್ಟಿದ್ದೀರಿ?



ತಾತ: ಇದು ನನ್ನ ದಿನಚರಿ. ಈ ಪುಟಗಳನ್ನು ಓದು ನಿನಗೆ ಕಾರಣಗಳು ಅರ್ಥವಾಗುತ್ತದೆ. ಆದರೆ ಕೆಲವು ಅಕ್ಷರಗಳು ವಿಭಿನ್ನವಾಗಿವೆ ಓದಲು ಪ್ರಯತ್ನಿಸು.

16.01.1962,

ಮಂಗಳವಾರ.

ಇಂದು ಪೂಂಬುಗಾರಿನಲ್ಲಿರುವ ತಾತನ ಮನೆಗೆ ಹೊರಟೆವು. ಎತ್ತಿನಗಾಡಿಯಲ್ಲಿ 80 ಮೈಲಿ ದೂರ. ಇಷ್ಟು ದೂರ ಪ್ರಯಾಣಿಸಿದ್ದು ಇದುವೇ ಮೊದಲು. ಅಪ್ಪ ಗಾಡಿಯನ್ನು ಓಡಿಸುತ್ತಿದ್ದರು.



"ಝಲ್.... ಝಲ್.... ಝಲ್.... ಝಲ್....." ಎಂಬ ಶಬ್ದದೊಂದಿಗೆ ಎತ್ತಿನಗಾಡಿ ಚಲಿಸುತ್ತಿತ್ತು. ನನಗೆ ಎತ್ತಿನಗಾಡಿ ಓಡಿಸುವ ಮನಸಾಯಿತು. ಅಪ್ಪ ನನಗೆ ಎತ್ತಿನಗಾಡಿಯ ಹಗ್ಗವನ್ನು ಕೊಟ್ಟರು. ಬಟೆಕ ಅವರು ಹಿಂದೆ ಕುಳಿತರು. ನಾನು ಹಗ್ಗವನ್ನು ಕೈಯಲ್ಲಿ ತೆಗೆದುಕೊಂಡೆ. ನಾನು ಅದರ ಹಗ್ಗವನ್ನು ಎಳೆದೆ. ಹಸುಗಳು ತಲೆ ಅಲ್ಲಾಡಿಸಿದವು ಕುತ್ತಿಗೆಯ ಗಂಟೆಗಳು ಜಲ್ ಜಲ್ ಶಬ್ದ ಮಾಡಿದವು.



"ಝಲ್.... ಝಲ್.... ಝಲ್.... ಝಲ್....."

ತಕ್ಷಣ ಎದುರಲ್ಲಿ ಬರುತ್ತಿದ್ದ ಗಾಡಿ ದೂರ ಸರಿಯಿತು.

"ಅದ್ಭುತ! ಚೆನ್ನಾಗಿ ಓಡಿಸುತ್ತೀಯಾ?" ಅಪ್ಪ ಹೊಗಳಿದರು. ತಾತನ ಮನೆಯನ್ನು ತಲುಪಿದೆವು. ಎತ್ತಿನಗಾಡಿಯಿಂದ ನೆಗೆದು ಕೆಳಗೆ ಇಳಿದೆವು.

ತಾತ ನೋಡಿದರು.

ಆಹಾ! ನೀನು ದೊಡ್ಡವನಾಗಿದ್ದೀಯಾ? ಎಂದು ನಕ್ಕರು. ಮನೆಯೊಳಗೆ ಹೋಗಿ ಹೊಸ ಉಡುಪನ್ನು ತೆಗೆದುಕೊಂಡು ಬಂದರು. ನಾನು ಧರಿಸಿಕೊಂಡೆನು.

ಊಟ ಸಿದ್ಧವಾಗಿತ್ತು ಹೊಟ್ಟೆ ತುಂಬಾ ತಿಂದು ಖುಷಿ ಪಟ್ಟೆವು. ತಮಿಳರ ಪರಂಪರೆಯ ಪಟಿಯ ಆಟಗಳನ್ನು ಆಟವಾಡಿ ಖುಷಿ ಪಟ್ಟೆವು. ಸಂಜೆ ಬೀದಿ ನಾಟಕ ನೋಡಲು ಹೊರಗೆ ಹೊರಟೆವು. ಕೆಜೆ, ನದಿ ಮರಳಿನ ಮೇಲೆ ಕುಳಿತು ಬೀದಿ ನಾಟಕ ನೋಡಿದೆವು.

ಕುರುಕಲು ತಿಂಡಿಗಳನ್ನು ತಿಂದೆವು. ಹುಣ್ಣಿಮೆಯ ಬೆಳಕಿನಲ್ಲಿ ನಡೆದವು, ಹಾಡುತ್ತ ಕುಣಿಯುತ್ತಾ ಮನೆಗೆ ಬಂದೆವು.

ಆಹಾ! ಎಂತಹ ಸಂತೋಷದ ದಿನ.





ಬನ್ನಿ ಮಾತನಾಡೋಣ

ನಿಮ್ಮ ಊರಿನಲ್ಲಿ ಜನರು ಸೇರುವ ಸ್ಥಳವಿದೆಯೇ? ಆ ಸ್ಥಳವನ್ನು ಏನೆಂದು ಕರೆಯುತ್ತಾರೆ? ಅದು ಯಾವುದಕ್ಕಾಗಿ ಉಪಯೋಗವಾಗುತ್ತದೆ? ನೀವು ಅಲ್ಲಿಗೆ ಏಕೆ ಹೋಗುತ್ತೀರಿ?

ಕಂಡುಹಿಡಿಯೋಣ

1. ಒಗಟುಗಳಿಗೆ ಸರಿಯಾದ ಉತ್ತರಗಳನ್ನು ಬರೆಯಿರಿ.

(ಛಾಯಾಚಿತ್ರ ಉಪಕರಣ ದಿನಚರಿ)

ನನಗೆ ಒಂದು ಕಣ್ಣು ಇದೆ
ಆದರೆ ನಾನು ಜಗತ್ತನ್ನು ನೋಡುತ್ತೇನೆ,
ನಾನು ನಿನ್ನ ಛಾಯಾಚಿತ್ರ ತೆಗೆಯುತ್ತೇನೆ.
ನಾನು ಯಾರು?

ಮುಚ್ಚಿ ಇರಿಸಿದರೆ ನಿಶಬ್ದವಾಗಿ ಇರುತ್ತೇನೆ .
ತೆರೆದು ನೋಡಿದರೆ,
ನಿನ್ನ ನೆನಪುಗಳನ್ನು ಮಾತನಾಡುವೆನು.
ನಾನು ಯಾರು?

ಒಗಟುಗಳನ್ನು ರಚಿಸಲು ಮಕ್ಕಳನ್ನು ಪ್ರೋತ್ಸಾಹಿಸಿ ಅವುಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು.

ಮುಗಿಲನ ದಿನಚರಿ

ದಿನಾಂಕ: **20.10.2026,**

ದಿನ: ಮಂಗಳವಾರ.

ನನ್ನ ತಾತನ ಹತ್ತಿರ ಚಿಕ್ಕ ವಯಸ್ಸಿನಲ್ಲಿ ಎತ್ತಿನಗಾಡಿಯನ್ನು ಓಡಿಸಿದ ಅನುಭವದ ಬಗ್ಗೆ ಕೇಳಿದೆನು. ಇಂದು ನಾನು ಎತ್ತಿನಗಾಡಿಯನ್ನು ಓಡಿಸಿ ಖುಷಿಪಟ್ಟೆನು.

ನಿಮ್ಮ ದಿನಚರಿ

ದಿನಾಂಕ:

ದಿನ:

ನಾನು, _____

_____

_____

_____

_____

ಶಿಕ್ಷಕರ ಕೈಪಿಡಿ

ಕೈಪಿಡಿಯಲ್ಲಿ ಕೊಡಲ್ಪಟ್ಟಿರುವ ಮಾರ್ಗೋಪಾಯಗಳನ್ನು ಅನುಸರಿಸಿ ಮಕ್ಕಳಿಗೆ ದಿನಚರಿಯನ್ನು ಬರೆಯಲು ಮಾರ್ಗದರ್ಶನ ನೀಡುವುದು.

ದಿನಾಂಕ	ನನ್ನ ದಿನಚರಿ...



ಕಥೆ ಕೇಳು! ಕಥೆ ಕೇಳು!

(ದಿನಚರಿಯನ್ನು ಓದಿ ಮುಗಿಸಿದ ನಂತರ ತಾತನ ಹತ್ತಿರ
ಪ್ರಾಚೀನ ಕಾಲದಲ್ಲಿ ನಡೆದವುಗಳನ್ನು ಹಾಡಾಗಿ ಕೇಳಿದರು)

ಚರ್ಚಿಸಿ ಕಲಿಯೋಣ

ಕಥೆ ಕೇಳು ಕಥೆ ಕೇಳು !

ಅಜ್ಜ ಅಜ್ಜಿಯ ಕಥೆ ಕೇಳು!

ಮುತ್ತಾತ ಮುತ್ತಜ್ಜಿಯ ಕಥೆ ಕೇಳು

ಮರಿಮುತ್ತಾತ ಮರಿಮುತ್ತಜ್ಜಿಯ ಕಥೆ ಕೇಳು

ತೆಂಗಿನ ಗರಿಗಳ ಛಾವಣಿಯ ಕೆಳಗೆ

ಕೂಡಿ ಬಾಳಿದ ಕಥೆ ಕೇಳು!

ಸೌದೆ ಒಲೆಯಲ್ಲಿ ಅಡುಗೆ ಮಾಡಿ

ಊಟ ಮಾಡಿ ಆನಂದಿಸಿದ ಕಥೆ ಕೇಳು!

(ಕಥೆ ಕೇಳು! ಕಥೆ ಕೇಳು!)

ಆಲದ ಮರದಲ್ಲಿ ಉಯ್ಯಾಲೆ ಕಟ್ಟಿ

ಆಡಿ ಆನಂದಿಸಿದ ಕಥೆ ಕೇಳು!

ಕೆರೆಯ ನೀರಿನಲ್ಲಿ ಮೀನು ಹಿಡಿದು

ಆಟವಾಡಿದ ಕಥೆ ಕೇಳು!

(ಕಥೆ ಕೇಳು! ಕಥೆ ಕೇಳು!)



ಕುದುರೆ ಜಿಗಿತ ಆಟವಾಡಿ

ದೇಹ ಸದೃಢವಾದ ಕಥೆ ಕೇಳು!

ಅಳಗುಳಿ ಮನೆಯ ಬೀಜಗಳಿಂದ

ಗಣಿತ ಕಲಿತ ಕಥೆ ಕೇಳು!

(ಕಥೆ ಕೇಳು! ಕಥೆ ಕೇಳು!)

ಕೋಳಿ ಕೂಗುವ ಶಬ್ದ ಕೇಳಿ

ಸಮಯ ತಿಳಿದ ಕಥೆ ಕೇಳು!

ಎತ್ತಿನಗಾಡಿ ಕುದುರೆ ಗಾಡಿಯಲ್ಲಿ

ಪಯಣ ಮಾಡಿದ ಕಥೆ ಕೇಳು!

(ಕಥೆ ಕೇಳು! ಕಥೆ ಕೇಳು!)

ಮಕ್ಕಳು ಹಾಡನ್ನು ರಾಗಬದ್ಧವಾಗಿ ಹಾಡುವುದಕ್ಕೆ ಮಾರ್ಗದರ್ಶನ ನೀಡುವುದು.

ಬನ್ನಿ ಮಾತನಾಡೋಣ

ನಿಮ್ಮ ಮನೆಯಲ್ಲಿರುವ ಹಿರಿಯರು ಅವರ ಜೀವನ ಶೈಲಿ (ಆಹಾರ, ಉಡುಪು, ವಸತಿ, ಆಟ) ಬಗ್ಗೆ ಹಂಚಿಕೊಂಡಿದ್ದಾರ? ಅವುಗಳು ಪ್ರಸ್ತುತದಲ್ಲಿ ಹೇಗೆ ಬದಲಾವಣೆಯಾಗಿದೆ?

ಕಂಡುಹಿಡಿಯೋಣ

DU9VQ

1. ಸಂಬಂಧಗಳ ಹೆಸರನ್ನು ಆಯ್ಕೆ ಮಾಡಿ ಬರೆ

ಅ) ಅಪ್ಪನ ಅಪ್ಪ _____ (ತಾತ / ಅಜ್ಜಿ)

ಆ) ತಾತನ ಅಪ್ಪ _____ (ತಾತ / ಮುತ್ತಾತ)

ಇ) ತಾತನ ಅಮ್ಮ _____ (ಮುತ್ತಾತ / ಮುತ್ತಜ್ಜಿ)

ಈ) ಅಮ್ಮನ ಅಮ್ಮ _____ (ಅಜ್ಜಿ / ಅಜ್ಜ)

ಉ) ಮುತ್ತಜ್ಜಿಯ ಅಪ್ಪ _____ (ಮುತ್ತಾತ / ಮರಿಮುತ್ತಾತ)

2. ಕೆಳಕಂಡ ಪದಗಳೊಂದಿಗೆ ಸಂಬಂಧಿಸಿದ ಮಾಹಿತಿಯನ್ನು ಪದ್ಯದಿಂದ ಕಂಡುಹಿಡಿದು ಬರೆ.

ಪದಗಳು	ಸಂಬಂಧಿಸಿದ ಮಾಹಿತಿ
ಮನೆ	ತೆಂಗಿನ ಗರಿಯ ಮನೆ
ಒಲೆ	
ಪಯಣ	
ಆಟ	
ಸಮಯ ತಿಳಿಯುವುದು	

ಹಾಡೋಣ! ಬರೆಯೋಣ!

ಜಿಗಿದು ಜಿಗಿದು ಜಿಗಿಯೋಣ

_____ _____ ಆನಂದಿಸೋಣ

ಕಥೆ ಕಥೆಯಾಗಿ _____

_____

ಹಾಡನ್ನು ಪೂರ್ಣಗೊಳಿಸಿ ಮಕ್ಕಳು ಹಾಡಲು ಸಹಾಯ ಮಾಡುವುದು.



ಕಲಿಕಾ ಪಯಣ

1. ವಾಕ್ಯ ವೃಂದವನ್ನು ಓದಿ ಉತ್ತರಿಸಿ.

ಮದನ್‌ನ ಅಜ್ಜಿ ಅರೆಯುವ ಕಲ್ಲಿನಲ್ಲಿ ಅರೆಯುತ್ತಿದ್ದರು. ಅಪ್ಪ, ಯಂತ್ರದ ಅರೆಯುವ ಕಲ್ಲಿನಲ್ಲಿ ಅರೆಯುತ್ತಾರೆ. ಅಜ್ಜ ವಾರ್ತಾ ಪತ್ರಿಕೆ ಓದುತ್ತಿದ್ದಾರೆ. ಅಮ್ಮ, ಮೊಬೈಲ್‌ನಲ್ಲಿ ವಾರ್ತೆಯನ್ನು ನೋಡುತ್ತಿದ್ದಾರೆ.

ಅ) ಈ ವಾಕ್ಯವೃಂದದಲ್ಲಿರುವ ಆಧುನಿಕ ವಸ್ತುಗಳು _____,

_____.

ಅ) ಮೊಬೈಲ್, ಅರೆಯುವ ಕಲ್ಲು ಆ) ಯಂತ್ರ ಅರೆಯುವ ಕಲ್ಲು, ಮೊಬೈಲ್

ಇ) ವಾರ್ತಾ ಪತ್ರಿಕೆ, ಅರೆಯುವ ಕಲ್ಲು ಈ) ಯಂತ್ರ ಅರೆಯುವ ಕಲ್ಲು, ದೂರದರ್ಶನ

ಆ) ಆಧುನಿಕ ಉಪಕರಣಗಳನ್ನು ಉಪಯೋಗಿಸುವವರು. _____,

_____.

ಅ) ಅಮ್ಮ, ಅಜ್ಜ ಆ) ಅಪ್ಪ, ಅಜ್ಜಿ

ಇ) ಅಪ್ಪ, ಅಮ್ಮ ಈ) ಅಜ್ಜ, ಅಜ್ಜಿ

ಇ) ಅಜ್ಜಿ _____ ಉಪಯೋಗಿಸಿ ವಿದ್ಯುತ್ತನ್ನು ಉಳಿತಾಯ ಮಾಡುತ್ತಾರೆ.

ಅ) ವಿದ್ಯುತ್ ಪಂಕ ಆ) ಮೊಬೈಲ್

ಇ) ಅರೆಯುವ ಕಲ್ಲು ಈ) ಯಂತ್ರ ಅರೆಯುವ ಕಲ್ಲು

2. ಮೌಖಿಕ ಪ್ರಶ್ನೆ

ನೀವು ದಿನಚರಿಯನ್ನು ಬರೆಯಲು ಇಷ್ಟಪಟ್ಟರೆ, ಮರೆಯಲಾರದ ಯಾವ ಘಟನೆ ಅಥವಾ ಅನುಭವವನ್ನು ಬರೆಯುವಿರಿ? ಏಕೆ?

3. ಕಾರ್ಯ ಯೋಜನೆ

ನಿಮ್ಮ ಮನೆಯಲ್ಲಿರುವ ಹಿರಿಯರು, ಚಿಕ್ಕವಯಸ್ಸಿನಲ್ಲಿ ಆಟವಾಡಿದ ಆಟಗಳ ಬಗ್ಗೆ ಮಾಹಿತಿಯನ್ನು ಶೇಖರಿಸಿಕೊಂಡು ಬರುವುದು.



ಕೈಪಿಡಿಯಲ್ಲಿ ಕೊಡಲ್ಪಟ್ಟಿರುವ ಮಾರ್ಗೋಪಾಯಗಳನ್ನು ಅನುಸರಿಸಿ ಮಕ್ಕಳು ಹಿರಿಯರ ಹತ್ತಿರ ಕೇಳಬೇಕಾದ ಪ್ರಶ್ನೆಗಳ ಬಗ್ಗೆ ಸ್ಪಷ್ಟಪಡಿಸುವುದು.



ನಾನು ಕಲಿತದ್ದು

ನಾನು ತಿಳಿದುಕೊಂಡಿದ್ದಕ್ಕೆ ⭐ ಬಣ್ಣ ಹಚ್ಚುವೆನು.

ನನ್ನಿಂದ,

1. **ಪ್ರಾಚೀನ ಕಾಲದ ತಮಿಳರು ಉಪಯೋಗಿಸಿದ ಮನೆ, ಆಹಾರ, ಉಡುಪು, ಆಟ ಮುಂತಾದವುಗಳನ್ನು ವಿವರಿಸಲು ಸಾಧ್ಯ.** ⭐
2. **ಆಧುನಿಕ ಜೀವನವನ್ನು ಪ್ರಾಚೀನ ಕಾಲದ ತಮಿಳರ ಜೀವನಕ್ಕೆ (ಆಹಾರ, ಉಡುಪು, ಆಟ) ಹೋಲಿಸಿ ಹೇಳಲು ಸಾಧ್ಯ.** ⭐



ನಾನೇ ಮಾಡುತ್ತೇನೆ

1. ಪ್ರಾಚೀನ ಕಾಲದ ವಸ್ತುಗಳು ಮತ್ತು ಅದಕ್ಕೆ ಸರಿಹೊಂದುವ ಆಧುನಿಕ ಕಾಲದ ವಸ್ತುಗಳನ್ನು ಆಯ್ಕೆ ಮಾಡಿ ಕೋಷ್ಟಕದಲ್ಲಿ ಬರೆಯಿರಿ.

ಕಪಾಟು	ಬಸ್ಸು	ಲಾಟೀನ್ ಬೆಳಕು	ಸೌದೆ ಒಲೆ
ಯಂತ್ರ ಅರೆಯುವ ಕಲ್ಲು	ಮರದ ಪೆಟ್ಟಿಗೆ	ಅನಿಲ ಒಲೆ	ತಾಳೆಗರಿ
ಪುಸ್ತಕ	ಅರೆಯುವ ಕಲ್ಲು	ಎತ್ತಿನ ಗಾಡಿ	ವಿದ್ಯುತ್ ದೀಪ

ಪ್ರಾಚೀನ ಕಾಲದ ವಸ್ತುಗಳು	ಆಧುನಿಕ ಕಾಲದ ವಸ್ತುಗಳು
ಉದಾ: ತಾಳೆಗರಿ	ಪುಸ್ತಕ

2. ಮೌಖಿಕ ಪ್ರಶ್ನೆ: ಸುತ್ತು! ಮಾತನಾಡು!



ಶಿಕ್ಷಕರ ಕೈಪಿಡಿ

ಮಕ್ಕಳು ಮೇಲ್ಕಂಡ ವಸ್ತುಗಳ ಬಗ್ಗೆ ಮಾತನಾಡಲು ಕೈಪಿಡಿಯಲ್ಲಿರುವ ಮಾರ್ಗೋಪಾಯಗಳನ್ನು ಅನುಸರಿಸುವುದು.

3. ಕಾರ್ಯ ಯೋಜನೆ



1. ತೆಂಗಿನಗರಿ /ತಾಳೆಗರಿ/ ಬಣ್ಣದ ಕಾಗದಗಳನ್ನು ಉಪಯೋಗಿಸಿ ತೋರಣವನ್ನು ಮಾಡಿ ತರಗತಿಯಲ್ಲಿ ಪ್ರದರ್ಶಿಸುವುದು.
2. ಹಳೆಯ ವಸ್ತುಗಳನ್ನು ಬಳಸಿ ತರಗತಿಯಲ್ಲಿ ವಸ್ತು ಪ್ರದರ್ಶನ ನಿರ್ಮಿಸುವುದು.

ಶಿಕ್ಷಕರ ಕೈಪಿಡಿ

ಕಾರ್ಯ ಯೋಜನೆಗೆ ಮಾರ್ಗೋಪಾಯಗಳನ್ನು ಕೈಪಿಡಿಯಲ್ಲಿ ಇರುವ ಹಾಗೆ ಅನುಸರಿಸುವುದು.

ಘಟಕ
2

ಪಯಣದ ಹಾದಿ

ಪಾದಾಚಾರಿ ಪಯಣ...!

ಮುಗಿಲನ್ ತನ್ನ ಅಜ್ಜನೊಂದಿಗೆ ಗೊಂಬೆಯಾಟ ನೋಡಲು ಹೋದನು.

ಚರ್ಚಿಸಿ ಕಲಿಯೋಣ



(ವಿದೂಷಕ ನಡೆಯುತ್ತಾ ಹೋಗುತ್ತಾರೆ ಎದುರಿಗೆ ಮನೋಹರನು ಬರುತ್ತಾರೆ)

ವಿದೂಷಕ : ತಮ್ಮ... ಯಾರಪ್ಪ... ನೀನು

ಮನೋಹರ : ನಾನು ಮನೋಹರ. ಸರಿ ನೀನು ಯಾರು?

ವಿದೂಷಕ : ನಕ್ಕುನಗಿಸುವ ವಿದೂಷಕ. ಯೋಚಿಸುವಂತೆ ಮಾಡುವ ವಿದೂಷಕ ಸರಿ... ಮೂಟೆಯಲ್ಲಿ ಏನಿದೆ?



ಮನೋಹರ : ಸುಗ್ಗಿ ಮುಗಿದಿದೆ ನನ್ನ ಅಕ್ಕನ ಮನೆಗೆ ತೆಗೆದುಕೊಂಡು ಹೋಗುತ್ತೇನೆ



ವಿದೂಷಕ : ಈ ಕಲ್ಲು ಮುಳ್ಳಿನ ದಾರಿಯಲ್ಲಿ ತಲೆಗೆ ನೋವಾದರೆ...! ಏನು ಮಾಡುತ್ತೀಯಾ?

ಮನೋಹರ : ಅಗೋ...! ಅಲ್ಲಿ...! ಸ್ವಲ್ಪ ದೂರದಲ್ಲಿ ಕಾಣುತ್ತಿದೆ ನೋಡು. ಕಲ್ಲಿನ ಮಂಟಪದಲ್ಲಿ ನಾನೇ ಮೂಟೆಯನ್ನು ಇಳಿಸಿ ಸ್ವಲ್ಪ ಸಮಯ ವಿಶ್ರಾಂತಿ ಪಡೆದು...! ನಾನೇ ಹೊತ್ತುಕೊಳ್ಳುವೆನು!

ವಿದೋಷಕ : ಓಹೋ...! ಓಹೋ...! ಅದ್ಭುತ...!

ಮನೋಹರ : ಜಲ್ ಜಲ್ ಕಾಡಿನೊಳಗೆ ಫಲ್ ಫಲ್ ಎಂದು ಹಾಡಿಕೊಂಡೆ...!

ವಿದೂಷಕ : ಆಹಾ...! ತಂದಾನೆ...! ಸುಡುಬಿಸಿಲಲ್ಲಿ ಹಾಡು ಬೇರೆ...!

ಮನೋಹರ : ಹೌದು ಹಾಡು ಹೇಳಿದರೆ ದಾರಿಯಲ್ಲಿರುವ ಪ್ರಾಣಿಗಳು ಓಡಿ ಹೋಗುತ್ತವೆ.



ವಿದೋಷಕ: ಅಪ್ಪಪ್ಪ ಬಲೆ ಚತುರ ನೀನು! ತುಂಬಾ ದೂರ ನಡೆದರೆ ಬಾಯಾರಿಕೆ ಆಗುತ್ತದೆ.

ಮನೋಹರ : ಬಿಸಿಲಿಗೆ ನೆರಳನ್ನು ನೀಡಲು ದಾರಿ ಉದ್ದಕ್ಕೂ ಬದಿಯಲ್ಲಿ ಮರಗಳು ಇವೆ. ತಿರುಗಿ ನೋಡು ನಿನ್ನ ದಾಹ ನೀಗಿಸಲು ನೀರಿನ ಮಂಟಪಗಳು ಇದೆ.

ಪ್ರಾಚೀನ ಕಾಲದಲ್ಲಿ ಕೊಳಗಳೇ, ನೀರಿನ ಡೇರೆಗಳು ಎಂದು ಕರೆಯಲ್ಪಟ್ಟವು ಎಂದು ಹೇಳುವುದು.



ವಿದೂಷಕ : ಆಹಾ ನೀರಿನ ರುಚಿ ಅದ್ಭುತ...! ಅದ್ಭುತ...!

(ವಿದೂಷಕ ಮನೋಹರ ತುಂಬಾ ದೂರ ನಡೆಯುತ್ತಾ ಹೋಗುತ್ತಿದ್ದಾರೆ. ಸಂಜೆ ಸಮಯ ಆಯಿತು)

ವಿದೂಷಕ : ರಾತ್ರಿಯಾಗುತ್ತಾ ಬಂದಿತು ನನಗೆ ಹಸಿವಾಗುತ್ತಿದೆ.

ಮನೋಹರ : ಅಗೋ ನೋಡು ಸ್ವಲ್ಪ ದೂರದಲ್ಲಿ ಊರು ಕಾಣಿಸುತ್ತಿದೆ. ಅಲ್ಲಿ ಛತ್ರ ಇದೆ ಊಟ ಮಾಡಿ ಮಲಗೋಣ...!

ವಿದೂಷಕ : ನಮಸ್ಕಾರ ಸ್ವಾಮಿ! ನಮಸ್ಕಾರ ಊಟ ಮಾಡಿ ಮಲಗುತ್ತೇವೆ...! ನಮಸ್ಕಾರ.

ನಮಸ್ಕಾರ...! ಸ್ವಾಮಿ ನಮಸ್ಕಾರ...! ಧನ್ಯವಾದ ಹೇಳುತ್ತೇವೆ ನಮಸ್ಕಾರ...!



ಶಿಕ್ಷಕರ ಕೈಪಿಡಿ

ಪ್ರತಿಯೊಂದು ಪಾತ್ರಧಾರಿಗೆ ಸೂಕ್ತವಾದ ಧ್ವನಿ ಏರಿಳಿತಗಳೊಂದಿಗೆ ಮಾತನಾಡಿ ಗೊಂಬೆಯಾಟವನ್ನು ಆಡಿ ತೋರಿಸಬೇಕು.

ಬನ್ನಿ ಮಾತನಾಡೋಣ

ಮೊಬೈಲ್ ಪತ್ರ ಮುಂತಾದವುಗಳು ಇಲ್ಲದಿರುವ ಕಾಲದಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಸುದ್ದಿ ಸಮಾಚಾರಗಳನ್ನು ಹೇಗೆ ಕಳುಹಿಸಲಾಗುತ್ತಿತ್ತು.

ಬನ್ನಿ ಬರೆಯೋಣ

1. **ವಾಕ್ಯವನ್ನು ಪೂರ್ಣಗೊಳಿಸಿ.**

(ಮೊಬೈಲ್, ಅರೆಯುವ ಕಲ್ಲು, ಬಸ್ಸಿನ ಪಯಣ, ವಸತಿ ನಿಲಯ, ವಿಮಾನ, ಯಂತ್ರ ಅರೆಯುವ ಕಲ್ಲು, ಪಾದಚಾರಿ ಪಯಣ, ಕುದುರೆ, ಛತ್ರ, ಪಾರಿವಾಳ)

ಅ. ಅಂದು ಮಕ್ಕಳು ಕಾಲ್ನಡಿಗೆಯಲ್ಲಿ ಪ್ರಯಾಣ ಹೋಗುತ್ತಿದ್ದರು. ಇಂದು ಬಸ್ಸಿನಲ್ಲಿ ಪ್ರಯಾಣ ಹೋಗುತ್ತಿದ್ದಾರೆ.

ಆ. ಅಂದು _____

ಇಂದು _____

ಇ. ಅಂದು _____

ಇಂದು _____

ಈ. ಅಂದು _____

ಇಂದು _____

2. ನೀವು ತುಂಬಾ ದೂರ ಪ್ರಯಾಣ ಮಾಡಬೇಕಾದರೆ ಯಾವ ವಾಹನದಲ್ಲಿ ಪ್ರಯಾಣ ಮಾಡುವಿರಿ? ಅದರಲ್ಲಿ ಸುರಕ್ಷಿತವಾಗಿ ಪ್ರಯಾಣ ಮಾಡಲು 2 ಹೊಸ ನಿಯಮಗಳನ್ನು ರಚಿಸಿ.

1. _____

2. _____

ಬನ್ನಿ ನಟಿಸೋಣ



- ಒಂದು ಗುಂಪು ಪ್ರಾಚೀನ ಕಾಲದ ಪ್ರಯಾಣದ (ನಡೆದುಹೋಗುವುದು, ಎತ್ತಿನ ಗಾಡಿ) ನಟನೆ ಮಾಡಿ ತೋರಿಸುವುದು.
- ಮತ್ತೊಂದು ಗುಂಪು ಆಧುನಿಕ ಕಾಲದ ಪ್ರಯಾಣವನ್ನು (ಬಸ್ಸು, ಕಾರು) ನಟನೆ ಮಾಡಿ ತೋರಿಸುವುದು.

ಪ್ರಯಾಣದ ವ್ಯತ್ಯಾಸಗಳನ್ನು ತರಗತಿಯಲ್ಲಿ ಚರ್ಚಿಸುವುದು.

ಬನ್ನಿ ಚಿತ್ರ ಬರೆಯೋಣ

- ಮುಗಿಲನ ಅಜ್ಜ ಚಿಕ್ಕವಯಸ್ಸಿನಲ್ಲಿ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುವಾಗ ದಾರಿಯಲ್ಲಿ ಅವರು ನೋಡಿದ ಛತ್ರ, ನೀರಿನ ಮಂಟಪ, ಕಲ್ಲಿನ ಮಂಟಪ ಮುಂತಾದವುಗಳನ್ನು ಚಿತ್ರ ಬರೆದಿದ್ದರು. ಆ ಚಿತ್ರಗಳನ್ನು ನೋಡಿ ತಾನು ನೋಡಿದ ದಾರಿಯನ್ನು ಹೇಳುವರು.
- ನಿಮ್ಮ ಮನೆಯಿಂದ ಹತ್ತಿರದಲ್ಲಿರುವ ಸ್ಥಳಗಳಿಗೆ ಕಾಲ್ನಡಿಗೆ ಪ್ರಯಾಣ ಹೋಗುವಾಗ, ಆ ದಾರಿಯಲ್ಲಿ ನೋಡಿದವುಗಳನ್ನು ಚಿತ್ರ ಬರೆಯಿರಿ.







ಎತ್ತಿನ ಗಾಡಿ ಪಯಣ...!

(ಗೊಂಬೆಯಾಟವನ್ನು ನೋಡಿ ಮನೆಗೆ ಹಿಂದಿರುಗಿದ ಮುಗಿಲ ಅಜ್ಜನ ಪಯಣದ ಅನುಭವವನ್ನು ಕೇಳಿದನು)

ಚರ್ಚಿಸಿ ಕಲಿಯೋಣ

ಬುತ್ತಿ ಕಟ್ಟಿಕೊಂಡು

ಎತ್ತಿಗೆ ನೊಗ ಕಟ್ಟಿಕೊಂಡು

ಹುಲ್ಲಿನ ಕಟ್ಟು ಹೊತ್ತುಕೊಂಡು

ಭತ್ತದ ಮೂಟೆ ಎತ್ತಿಕೊಂಡು

ಹೋಗಬೇಕು ದೂರ... ಬಂಡಿಯಲ್ಲಿ ಭಾರ –2

ಎತ್ತಿನಗಾಡಿಯನ್ನು ಓಡಿಸಿಕೊಂಡು

ಗೆಜ್ಜೆನಾದ ಕೇಳಿಸಿಕೊಂಡು

ಹಾಡೊಂದನ್ನು ಹಾಡಿಕೊಂಡು

ಊರಿನ ಸಂತೆಯ ಹುಡುಕಿಕೊಂಡು

ಹೋಗಬೇಕು ದೂರ... ಬಂಡಿಯಲ್ಲಿ ಭಾರ –2



ಭತ್ತದ ಮೂಟೆಯ ಬದಲಾಯಿಸಿಕೊಂಡು
ಉಪ್ಪು ಬೇಳೆ ಮೂಟೆ ಎತ್ತಿಕೊಂಡು
ಊರಿನ ಕಥೆಯ ಕೇಳಿಕೊಂಡು
ತಿರುಗಾಣಿ ಸರಿ ಪಡಿಸಿಕೊಂಡು
ಹೋಗಬೇಕು ದೂರ.... ಬಂಡಿಯಲ್ಲಿ ಭಾರ.... 2

ಎತ್ತಿಗೆ ನೀರನ್ನು ಕುಡಿಸಿಕೊಂಡು
ಹುಲ್ಲಿನ ಕಟ್ಟನ್ನು ಹಾಕಿಕೊಂಡು
ಬುತ್ತಿ ಊಟ ಮಾಡಿಕೊಂಡು
ಚಿಕ್ಕ ನಿದ್ರೆ ಮುಗಿಸಿಕೊಂಡು
ಹೋಗಬೇಕು ದೂರ... ಬಂಡಿಯಲ್ಲಿ ಭಾರ.... 2

ರಾತ್ರಿಯಾದರೆ ನಿಲ್ಲಿಸಿ ಕೊಂಡು
ಲಾಟಿನ್ ಬೆಳಕು ಎತ್ತಿಕೊಂಡು
ಕಷ್ಟ ತಿಳಿಯದಿರಲು ಹಾಡಿಕೊಂಡು
ಮನೆಗೆ ಬಂದೆವು ನಕ್ಕಿಕೊಂಡು
(ಝುಲ್ ಝುಲ್ ಝುಲ್ ಝುಲ್)

ಮಕ್ಕಳು ಹಾಡನ್ನು ರಾಗ ಬದ್ಧವಾಗಿ ಹಾಡುವುದಕ್ಕೆ ಮಾರ್ಗದರ್ಶನ ನೀಡುವುದು.



ಬನ್ನಿ ಮಾತನಾಡೋಣ

ಪ್ರಾಚೀನ ಕಾಲದಲ್ಲಿ ಜನರು ಸಂತೆಗೆ ಹೋಗಿ ವಸ್ತುಗಳನ್ನು ಖರೀದಿಸುತ್ತಿದ್ದರು. ಪ್ರಸ್ತುತದಲ್ಲಿ ನಾವು ವಸ್ತುಗಳನ್ನು ಹೇಗೆ ಖರೀದಿಸುತ್ತೇವೆ?

ಬನ್ನಿ ಬರೆಯೋಣ

1. ಸೂಚನೆಗಳನ್ನು ಬಳಸಿ ಕಥೆಯನ್ನು ಪೂರ್ಣಗೊಳಿಸಿ.

(ತಿರುಗಾಣಿ, ಭತ್ತದ ಮೂಟೆ, ಹುಲ್ಲಿನ ಕಟ್ಟು, ಲಾಟೀನ್ ಬೆಳಕು, ಬುತ್ತಿ ಊಟ)

ಒಂದು ದಿನ ಎತ್ತಿನಗಾಡಿಯಲ್ಲಿ...

2. ಸಂತೆಗೆ ಹೋಗುವ ದಾರಿಯಲ್ಲಿ ಎತ್ತಿನಗಾಡಿಯ ಚಕ್ರ ಮುರಿದುಬಿಟ್ಟಿತು. ಏನು ಮಾಡುವಿರಿ?

ಬನ್ನಿ ನಟನೆ ಮಾಡೋಣ



- ಒಬ್ಬರು ವರದಿಗಾರನಂತೆ ನಟನೆ ಮಾಡುವುದು.
- ಮತ್ತೊಬ್ಬರು ಎತ್ತಿನಗಾಡಿ ಚಾಲಕನಂತೆ / ಬಸ್ ಚಾಲಕನಂತೆ ನಟನೆ ಮಾಡುವುದು.

ವರದಿಗಾರ ಕೇಳಬೇಕಾದವುಗಳು

ಅ. ನಿಮ್ಮ ವಾಹನ ಯಾವುದಕ್ಕೆ ಉಪಯೋಗವಾಗಿದೆ?

ಆ. ಜನರಿಗೆ ಹೇಗೆ ಸಹಾಯಕವಾಗಿದೆ? ಮುಂತಾದ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರಿಸುವುದು.

ಮಕ್ಕಳನ್ನು ಪ್ರೋತ್ಸಾಹಿಸಿ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ರಚಿಸುವಂತೆ ಮಾಡುವುದು.

ಕುದುರೆ ಗಾಡಿಯ ಪಯಣ

ಮುಗಿಲ ತನ್ನ ಅಜ್ಜನ ಜೊತೆಯ ಪ್ರಯಾಣದ ಅನುಭವವನ್ನು ತರಗತಿಯಲ್ಲಿ ಹಂಚಿಕೊಂಡನು. ಶಿಕ್ಷಕರು ಅದನ್ನು ಕೇಳಿದರು.

IB3EO



ಚರ್ಚಿಸಿ ಕಲಿಯೋಣ

ಶಿಕ್ಷಕ : ಎತ್ತುಗಳಂತೆ ಪ್ರಯಾಣಕ್ಕೆ ಕುದುರೆಗಳನ್ನು ಉಪಯೋಗಿಸಿದರು. ಎತ್ತುಗಳಿಗಿಂತ ಕುದುರೆಗಳು ವೇಗವಾಗಿ ಓಡುತ್ತವೆ. ಆದ್ದರಿಂದ ಜನರು ಕುದುರೆಗಳನ್ನು ಪ್ರಯಾಣ ಮಾಡಲು ಅಭ್ಯಾಸ ಮಾಡಿಸಿದರು.

ಸುಮತಿ : ಕುದುರೆ ಬಂಡಿಯನ್ನು ಎಳೆಯುತ್ತದೆಯೇ?



ಶಿಕ್ಷಕ : ಕುದುರೆ ಬಲಿಷ್ಠವಾಗಿದೆ. ಅದು ಬಂಡಿಯನ್ನು ಎಳೆಯುತ್ತದೆ, ನೀವು ಅದರ ಮೇಲೆ ಸವಾರಿ ಕೂಡ ಮಾಡಬಹುದು.

ಭಾನು : ಓಡುವಾಗ ಮೇಲೆ ಕುಳಿತಿರುವವರು ಕೆಳಗೆ ಬೀಳುವುದಿಲ್ಲವೇ?

ಶಿಕ್ಷಕ : ಇಲ್ಲ ಅವು ಕೆಳಗೆ ಬೀಳದಂತೆ ಜೀನುಗಳನ್ನು ಹಾಕಲಾಗಿರುತ್ತದೆ. ದಾರಿ ತಪ್ಪದಂತೆ ಕಣ್ಣುಗಳಿಗೆ ಕಡಿವಾಣ ಕಟ್ಟಲಾಗಿದೆ. ಆದ್ದರಿಂದ ಭಯವಿಲ್ಲದೆ ಪ್ರಯಾಣಿಸಬಹುದು.

ಮುಗಿಲ : ಕುದುರೆಯ ಇತರ ಉಪಯೋಗಗಳು ಯಾವುವು?

ಶಿಕ್ಷಕ : ಪರ್ವತಗಳಲ್ಲಿ ಪಯಣ ಮಾಡಲು, ರಕ್ಷಣೆಗಾಗಿ, ವ್ಯಾಪಾರಕ್ಕಾಗಿ, ಬೇಟೆಯಾಡುವುದಕ್ಕಾಗಿ, ಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕಾಗಿ ಉಪಯೋಗಿಸಿದರು. ಸಾರಿಗೆ ಎಂಬುದು ಕಾಲ್ನಡಿಗೆ ಪ್ರಯಾಣದಿಂದ ಪ್ರಾರಂಭಿಸಿ ಪ್ರಸ್ತುತದ ವಿಮಾನ ಪಯಣದವರೆಗೆ ಅಭಿವೃದ್ಧಿಯಾಗಿದೆ.

ನಿಮಗೆ ತಿಳಿದಿದೆಯೇ?

ಕುದುರೆಗಳು ನಿಂತುಕೊಂಡೇ ನಿದ್ರಿಸುವ ಸಾಮರ್ಥ್ಯವುಳ್ಳದ್ದು.



ಬನ್ನಿ ಮಾತನಾಡೋಣ

ನಿಮ್ಮ ಊರಿನಲ್ಲಿ ಯಾವ ಸಂಚಾರ ಸಾರಿಗೆ ತುಂಬಾ ಉಪಯೋಗವುಳ್ಳದ್ದಾಗಿದೆ? ಏಕೆ?

ಬನ್ನಿ ಬರೆಯೋಣ

1. ಕೆಳಕಂಡ ಸ್ಥಳಗಳಿಗೆ ಸೂಕ್ತವಾದ ಸಂಚಾರ ಸಾರಿಗೆಯನ್ನು ಆಯ್ಕೆ ಮಾಡಿ ಕಾರಣ ಬರೆ.

ಸ್ಥಳ	ಸಂಚಾರ ಸಾರಿಗೆ	ಏಕೆ?
ಬೆಟ್ಟ		
ನಗರ		
ನದಿ		

2. ಕೆಳಕಂಡ ಚಿತ್ರದಲ್ಲಿರುವವರು ಏನು ಮಾತನಾಡುತ್ತಿರಬಹುದು1 ಎಂದು ಬರೆಯಿರಿ.



ಕಲಿಕಾ ಪಯಣ

SW3QU

1. ಕೆಳಕಂಡ ಸಂಚಾರ ಸಾರಿಗೆಯ ಬಗೆಗಳನ್ನು ವರ್ಗೀಕರಿಸಿ. ಯಾವುದಾದರೂ ಎರಡು ವಾಹನದ ಉಪಯೋಗಗಳನ್ನು ಬರೆ.

(ರೈಲು, ಕುದುರೆ ಗಾಡಿ, ಎತ್ತಿನಗಾಡಿ, ಕಾರು)

ಪ್ರಾಚೀನ ಕಾಲದ ಸಾರಿಗೆ	ಆಧುನಿಕ ಕಾಲದ ಸಾರಿಗೆ

(1) _____

(2) _____

2. **ಮೌಖಿಕ ಪ್ರಶ್ನೆ :** ಯಾವುದಾದರೂ ಒಂದು ಚಿತ್ರವನ್ನು ಆಯ್ಕೆ ಮಾಡಿ ಅಲ್ಲಿ ಯಾವ ಸಾರಿಗೆ ಉತ್ತಮವಾದದು? ಏಕೆ? ಮಾತನಾಡಿ.






ಶಿಕ್ಷಕರ ಕೈಪಿಡಿ ಮಕ್ಕಳು ಮೇಲ್ಕಂಡ ಚಿತ್ರಗಳ ಬಗ್ಗೆ ಮಾತನಾಡಲು ಕೈಪಿಡಿಯಲ್ಲಿರುವ ಮಾರ್ಗೋಪಾಯಗಳನ್ನು ಅನುಸರಿಸುವುದು.

3. **ಕಾರ್ಯ ಯೋಜನೆ:**

ಅಜ್ಜ, ಅಜ್ಜಿ ಹಿರಿಯರ ಹತ್ತಿರ ಪ್ರಾಚೀನ ಕಾಲದ ಸಾರಿಗೆಯ ಬಗೆಗಳ ಬಗ್ಗೆ ಸಂದರ್ಶನ ಮಾಡಿರಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದು ತರಗತಿಯಲ್ಲಿ ಹಂಚಿಕೊಳ್ಳಿರಿ.

- ನೀವು ಚಿಕ್ಕವಯಸ್ಸಿನಲ್ಲಿ ಯಾವ ಸಾರಿಗೆಯನ್ನು ಬಳಸಿದ್ದೀರಿ?
- ಆ ಸಾರಿಗೆಯಲ್ಲಿ ಎಲ್ಲಿ ಹೋಗಿದ್ದೀರಿ?
- ಇಂದು ಅದಕ್ಕೆ ಪ್ರತಿಯಾಗಿ ಯಾವ ಸಾರಿಗೆಯನ್ನು ಬಳಸುತ್ತೀರಿ?

ನಾನೇ ಕಲಿತದ್ದು

ಶಿಕ್ಷಕರ ಕೈಪಿಡಿ ಕಾರ್ಯ ಯೋಜನೆಗೆ ಮಾರ್ಗಗಳನ್ನು ಕೈಪಿಡಿಯಲ್ಲಿ ಇರುವ ಹಾಗೆ ಅನುಸರಿಸುವುದು

ನಾನು ತಿಳಿದುಕೊಂಡಿದ್ದಕ್ಕೆ ☆ ಬಣ್ಣ ಹಚ್ಚುವೆನು.

ನನ್ನಿಂದ,

1. ಪ್ರಾಚೀನ ಕಾಲದ ಪ್ರಯಾಣದ ಬಗ್ಗೆ ಕಥೆಗಳನ್ನು ಕೇಳಿ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ☆
2. ಸಾರಿಗೆ ಬಗೆಗಳನ್ನು ಪ್ರಾಚೀನ ಕಾಲ ಮತ್ತು ಆಧುನಿಕ ಕಾಲ ಎಂದು ವರ್ಗೀಕರಿಸಲು ಸಾಧ್ಯ. ☆



ನಾನೇ ಮಾಡುತ್ತೇನೆ

1. ಯೋಚಿಸಿ ಉತ್ತರಿಸಿ.

1. ಮಾನವನ ಸಾರಿಗೆ ಇತಿಹಾಸದಲ್ಲಿ, ಪ್ರಯಾಣವನ್ನು ಸುಲಭವಾಗಿ ವೇಗವಾಗಿ ಪರಿವರ್ತಿಸಿದ ಮುಖ್ಯವಾದ ಸಂಶೋಧನೆ ಯಾವುದು?

ಅ) ಹಗ್ಗ ಆ) ಮರದ ದಿಮ್ಮಿ ಇ) ಚಕ್ರ ಈ) ಕಲ್ಲು

ಉತ್ತರ: _____

2. ವಸ್ತುಗಳನ್ನು ಹೊತ್ತುಕೊಂಡು ಹೋಗಲು ಪ್ರಯಾಣಿಸಲು ಸಹಾಯ ಮಾಡುವ ಪ್ರಾಣಿಗಳು ಯಾವುವು?

ಅ) ಆಡು ಮತ್ತು ಮಂಗ ಆ) ಹಸು ಮತ್ತು ಕುದುರೆ

ಇ) ಹಸು ಮತ್ತು ನಾಯಿ ಈ) ಆಡು ಮತ್ತು ಕುದುರೆ

ಉತ್ತರ: _____

3. ಕೆಳಗಿನವುಗಳಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಸಾರಿಗೆಯ ಅಭಿವೃದ್ಧಿಯನ್ನು ತೋರಿಸುವುದು ಯಾವುದು?

ಅ) ಬಸ್ಸು → ಕಾಲ್ನಡಿಗೆ ಪ್ರಯಾಣ → ಎತ್ತಿನಗಾಡಿ
ಆ) ಬಸ್ಸು → ಎತ್ತಿನಗಾಡಿ → ಕಾಲ್ನಡಿಗೆ ಪ್ರಯಾಣ
ಇ) ಎತ್ತಿನಗಾಡಿ → ಕಾಲ್ನಡಿಗೆ ಪ್ರಯಾಣ → ಬಸ್ಸು
ಈ) ಕಾಲ್ನಡಿಗೆ ಪ್ರಯಾಣ → ಎತ್ತಿನಗಾಡಿ → ಬಸ್ಸು

ಉತ್ತರ: _____

4. ಅಜ್ಜಿ ತನ್ನ ಮೊಮ್ಮಗನ ಹತ್ತಿರ "ನಾವು ಚಿಕ್ಕವಯಸ್ಸಿನಲ್ಲಿ ಹತ್ತಿರದ ಊರಿಗೆ ಹೋಗಲು ದಿನಪೂರ್ತಿ ಎತ್ತಿನಗಾಡಿಯಲ್ಲಿ ಪ್ರಯಾಣ ಮಾಡುವೆವು" ಎಂದು ಹೇಳಿದರು. ಆದರೆ ಇಂದು ಅದೇ ಊರಿಗೆ ಒಂದು ಗಂಟೆ ಸಮಯದಲ್ಲಿ ಬಸ್ಸಿನಲ್ಲಿ ಹೋಗಲು ಸಾಧ್ಯವಾಗುತ್ತದೆ. ಇದಕ್ಕೆ ಮುಖ್ಯವಾದ ಕಾರಣವೇನು?

ಉತ್ತರ: _____

_____

2. ಮೌಖಿಕ ಪ್ರಶ್ನೆ

ಸಾರಿಗೆ ವ್ಯವಸ್ಥೆ ಇಲ್ಲದಿದ್ದರೆ ವ್ಯವಸಾಯದ ವಸ್ತುಗಳು ಜನರಿಗೆ ಹೇಗೆ ಸೇರಿರುತ್ತಿತ್ತು?

3. ಕಾರ್ಯ ಯೋಜನೆ



ಕೊಟ್ಟಿರುವ ಮಾರ್ಗದರ್ಶನವನ್ನು ಅನುಸರಿಸಿ ವಸ್ತುಗಳು ಜನರಿಗೆ ಯಾವ ರೀತಿ ತಲುಪುತ್ತವೆ ಎಂಬುದರ ಬಗ್ಗೆ ಚರ್ಚಿಸುವಂತೆ ಮಕ್ಕಳನ್ನು ಉತ್ತೇಜಿಸುವುದು.

1. ಸೂಕ್ಷ್ಮವಾಗಿ ಗಮನಿಸಿ ಉತ್ತರಿಸಲು

ನಿಮ್ಮ ಮನೆ ಅಥವಾ ಶಾಲೆಯ ಹತ್ತಿರ 20 30 ನಿಮಿಷಗಳಲ್ಲಿ ಬಂದು ಹೋಗುವ ವಾಹನಗಳನ್ನು ಸೂಕ್ಷ್ಮವಾಗಿ ಗಮನಿಸಿರಿ. ಅವುಗಳ ಸಂಖ್ಯೆಗಳನ್ನು ಪಟ್ಟಿಯಲ್ಲಿ ದಾಖಲಿಸಿ.

ನೀವು ನೋಡಿದ ವಾಹನಗಳ ಚಿತ್ರಗಳನ್ನು ಬರೆದು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.

ಅ. ಯಾವ ಬಗೆಯ ವಾಹನಗಳನ್ನು ಅಧಿಕವಾಗಿ ನೋಡಿದ್ದೀರಿ? ಅದಕ್ಕೆ ಕಾರಣವೇನು?

ಆ. ಯಾವ ಬಗೆಯ ವಾಹನಗಳು ಕಡಿಮೆಯಾಗಿ ಕಾಣಿಸುತ್ತವೆ? ಅದಕ್ಕೆ ಕಾರಣವೇನು?

ಇ. ಹೆಚ್ಚು ಜನರನ್ನು ಹತ್ತಿಸಿಕೊಂಡು ಹೋಗುವ ವಾಹನ ಯಾವುದು? ಅದನ್ನು ಹೇಗೆ ತಿಳಿದುಕೊಂಡಿರಿ?

ಈ. ನಿಮ್ಮ ಪ್ರದೇಶದಲ್ಲಿ ಬಸ್ಸು ಇಲ್ಲದಿದ್ದರೆ ಜನರು ಹೇಗೆ ಪ್ರಯಾಣ ಮಾಡುವರು?

2. ಸಂಚಾರ ಸಾರಿಗೆಯ ಅಭಿವೃದ್ಧಿಯನ್ನು ಕಾಲ್ನಡಿಗೆ ಪ್ರಯಾಣದಿಂದ ವಿಮಾನದವರೆಗೆ ಚಿತ್ರಗಳ ಗುಂಪಾಗಿಯೋ, ಸ್ಕ್ರ್ಯಾಪ್ ಪುಸ್ತಕವಾಗಿಯೋ, ಬಿತ್ತಿ ಪತ್ರವನ್ನು ತಯಾರಿಸಿ ತರಗತಿ ಕಲಾಮಂದಿರದಲ್ಲಿ ಪ್ರದರ್ಶಿಸುವುದು.





ಕಾರ್ಯ ಯೋಜನೆಗೆ ಮಾರ್ಗೋಪಾಯಗಳನ್ನು ಕೈಪಿಡಿಯಲ್ಲಿ ಇರುವ ಹಾಗೆ ಅನುಸರಿಸುವುದು.

ಪದಸಂಪತ್ತು			
1	ಸಜ್ಜ	ಕೋಣೆಯ ಛಾವಣಿಯ ಮೇಲಿನ ಮರದ ಚೌಕಟ್ಟು	loft
2	ಪ್ರಾಚೀನ ಲೇಖನಿ	ಬರೆಯುವ ಮೊಳೆ ರೀತಿಯ ಉಪಕರಣ	writing instrument like pen
3	ಸಂಕೇತಗಳು	ಗುರುತು ಚಿಹ್ನೆ	symbol, sign
4	ತಾಳೆಗರಿ	ತಾಳೆಗರಿಂದ ರಚಿತವಾದ ಗ್ರಂಥ	palm leaf manuscript
5	ತಿರುಗಾಣಿ	ಚಕ್ರ ಕಿತ್ತು ಬೀಳದಂತೆ ತಡೆಯುವ ಮೊಳೆ	axle pin
6	ಬೆಂಕಿ ಚೆಂಡು	ಸುಡುವುದಕ್ಕಾಗಿ ಎಣ್ಣೆಯಲ್ಲಿ ಅದ್ದಿದ ಬಟ್ಟೆಯನ್ನು ಸುತ್ತಿದ ದೊಣ್ಣೆ	fire torch
7	ಕಲ್ಲಿನ ಮಂಟಪ	ಎರಡು ಕಂಬಗಳ ಮೇಲೆ ಏಕಶಿಲೆ ಮಂಟಪ	rest stone
8	ಮೈಲು	ದೂರವನ್ನು ಅಳೆಯುವುದಕ್ಕಾಗಿ ಇರುವ ಒಂದು ಅಳತೆ	to measure a distance
9	ಛಾವಟಿ	ವೇಗವಾಗಿ ಸವಾರಿ ಮಾಡಲು ಛಾವಟಿ ಬೀಸುವುದು	swinging a whip to make a ride fast
10	ತಡಿ	ಪ್ರಾಣಿಗಳ ಬೆನ್ನಿನಲ್ಲಿ ಕುಳಿತುಕೊಳ್ಳಲು ಇರುವ ಆಸನ	saddle
11	ಕಡಿವಾಣ	ಕುದುರೆಯ ಕಣ್ಣನ್ನು ಮುಚ್ಚಲು ಅದರ ಸುತ್ತಲೂ ಕಟ್ಟುವ ಬಟ್ಟೆ	blinkers
12	ಅಭ್ಯಾಸ ಮಾಡು	ತರಬೇತಿ ನೀಡು	to train

ಕಲಿಕಾ ಪಯಣ


ಪ್ರಾಚೀನ ಕಾಲದ ಸಾರಿಗೆಯ ಬಗೆಗಳನ್ನು ಇಂದಿನ ಸಾರಿಗೆಯ ವಾಹನಗಳನ್ನು ಹೋಲಿಸುವುದು.
ಪ್ರಾಚೀನ ಕಾಲದ ಜನರು ಮತ್ತು ವಸ್ತುಗಳನ್ನು ಸಾಗಿಸಲು ಪ್ರಾಣಿಗಳು ಮುಖ್ಯ ಪಾತ್ರ ವಹಿಸಿದ ಬಗ್ಗೆ ವಿವರಿಸುವುದು.
ಆಧುನಿಕ ಜೀವನವನ್ನು ಪ್ರಾಚೀನ ಕಾಲದ ತಮಿಳರ ಜೀವನವನ್ನು (ಆಹಾರ, ಉಡುಪು, ಆಟ) ಬೇರ್ಪಡಿಸುವುದು.
ಕಥೆಗಳು, ವಸ್ತುಗಳು, ಸ್ಥಳಗಳು, ಜನರ ನೆನಪುಗಳು ಮುಂತಾದವುಗಳ ಮೂಲಕ ಇತಿಹಾಸವನ್ನು ವಿವರಿಸುವುದು.
ದಿನನಿತ್ಯ ಬಳಕೆಯ ವಸ್ತುಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ಹೋಲಿಸುವುದು.

Standard 3 - Mathematics - Term - II - Kannada Medium

Textbook Development Team

Co-ordinator

Dr. T. Jayagandhi,
Senior Lecturer,
SCERT, Chennai

Reviewer

K.N. Adishesha, SGT
PUPS Sothanapuram,
Talavadi, Erode

Translator

D.Shivakumar, SGT
PUPS,Chikkhalli,
Talavadi, Erode.

P.Siddaraju, SGT
PUPS,Byannapuram,
Talavadi, Erode.

S.Shivaramu, SGT
PUPS,Iggalore,
Talavadi, Erode.

C.Mahadeva, SGT
PUPS, Hiripuram,
Talavadi, Erode.

Art and Design Team

M. Amalraj,
Layout Co-ordinator
B.T. Asst., SCERT, Chennai.

R. Adarsh, Designer

E.J. Karunakaran, Designer

Illustration

R. Rajesh

Wrapper Design

Kathir Arumugam

Standard 3 - Science - Term - II - Kannada Medium

Textbook Development Team

Co-ordinator
Dr. T. Jayagandhi,
Senior Lecturer,
SCERT, Chennai.

Reviewer
K.N. Adishesha, SGT
PUPS Sothanapuram,
Talavadi, Erode.

Translator
P.Siddaraju, SGT
PUPS,Byannapuram,
Talavadi, Erode.
C.Mahadeva, SGT
PUPS,Hiripuram,
Talavadi, Erode.

Art and Design Team
M. Amalraj,
Layout Co-ordinator
B.T. Asst., SCERT, Chennai.

T.K.Poornachandran, Designer
S.Praveen, Designer

Illustration
B. Pramoth

Wrapper Design
Kathir Arumugam

Standard 3 - Social Science - Term - II - Kannada Medium
Textbook Development Team

Co-ordinator

Dr. T. Jayagandhi,
Senior Lecturer,
SCERT, Chennai.

Reviewer

K.N. Adishesha, SGT
PUPS Sothanapuram,
Talavadi, Erode.

Translator

G. Mamatha, SGT
PUMS Talavadi
Talavadi, Erode.

S. Mary Flora, SGT
PUMS Mettalavadi
Talavadi, Erode.

Art and Design Team

M. Amalraj,
Layout Co-ordinator
B.T. Asst., SCERT, Chennai.

C.Prasanth, Designer, Designer

R.Balasubramani, Designer

Illustration

B. Pramoth

Wrapper Design

Kathir Arumugam

This book has been printed on 80 G.S.M.
Elegant Maplitho paper.
Printed by offset at: